# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಫೆಬ್ರವರಿ 7, 2025

ಸಂಪುಟ : 51 ಸಂಚಿಕೆ : 266 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







# ಪಾಲಿಕೆ: 5.16 ಕೋಟಿ ಉಳಿತಾಯ ಬಜೆಟ್

## ವಿಶ್ವ ಸಮ್ಮೇಳನಕ್ಕೆ 50 ಲಕ್ಷ, ಜಿಲ್ಲಾ ಹಾಗೂ ತಾಲ್ಲೂಕು ಸಮ್ಮೇಳನಗಳಿಗೆ ಹಣ ಮೀಸಲು

ದಾವಣಗೆರೆ, ಫೆ.6- ಮಹಾನಗರ ಪಾಲಿಕೆಯ ಆಡಳಿತಾರೂಢ ಕಾಂಗ್ರೆಸ್ 2025–26ನೇ ಸಾಲಿನ ಆರ್ಥಿಕ ವರ್ಷಕ್ಕೆ 516.35 ಲಕ್ಷ ರೂಪಾಯಿಯ ಮಿಗತೆ ಬಜೆಟ್ಟನ್ನು ಗುರುವಾರ ನಗರದ ಪಾಲಿಕೆ ಸಭಾಭವನದಲ್ಲಿ ಮಂಡಿಸಿತು.

ಪಾಲಿಕೆ ಮೇಯರ್ ಕೆ.ಚಮನ್ ಸಾಬ್, 'ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ಹೋಗಬಾರದು...' ವಚನದ ಮೂಲಕ ಬಜೆಟ್ ಮಂಡಿಸುತ್ತಾ, ಕೊನೆಯಲ್ಲಿ 'ಇವನಾರವ ಇವನಾರವ...' ವಚನ ಹೇಳುವ ಮೂಲಕ ಎಲ್ಲರೂ ಅಭಿವೃದ್ಧಿಗೆ ಕೈ ಜೋಡಿಸುವಂತೆ ಕರೆ ನೀಡಿದರು.

ಬಜೆಟ್‌ನಲ್ಲಿ ಕೆಲವು ಹೊಸ ಯೋಜನೆ, ಕಾಮಗಾರಿಗಳಿಗೆ ಅನುದಾನ ಘೋಷಿಸಿದ್ದರೂ, ಈ ಹಿಂದಿನ ಬಜೆಟ್‌ಗಳಲ್ಲಿ ಘೋಷಿಸಿದ್ದ ಹಲವು ಯೋಜನೆಗಳನ್ನು ಈ ಬಾರಿಯ ಬಜೆಟ್‌ನಲ್ಲಿ ಮತ್ತೆ ಪ್ರಸ್ತಾಪಿಸಲಾಗಿದೆ.

**ವಿಶ್ವ ಕನ್ನಡ ಸಮ್ಮೇಳನಕ್ಕೆ 50 ಲಕ್ಷ ರೂ.:** ಮುಂದಿನ ವರ್ಷ ದಾವಣಗೆರೆ ನಗರದಲ್ಲಿ ರಾಜ್ಯ ಸರ್ಕಾರವು ವಿಶ್ವ ಸಮ್ಮೇಳನ ಆಯೋಜಿಸುವ ಸಾಧ್ಯತೆ ಇರುವುದಾಗಿ ಹೇಳಿ, ಇದಕ್ಕಾಗಿ ಪಾಲಿಕೆ 50 ಲಕ್ಷ ರೂ. ವಂತಿಕೆ ನೀಡಲು (4ನೇ ಪುಟಕ್ಕೆ)



ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಮೇಯರ್ ಕೆ.ಚಮನ್ ಸಾಬ್ ಅವರು 2025–26ನೇ ಸಾಲಿನ ಬಜೆಟ್ ಪ್ರತಿ ಬಿಡುಗಡೆ ಮಾಡಿದರು.

### ಜಲಸಿರಿ: ವಿಪಕ್ಷ-ಆಡಳಿತ ಪಕ್ಷ ವಾಕ್ಸಮರ


34 ಝೋನ್‌ಗಳಲ್ಲಿ ಜಲಸಿರಿ ಯೋಜನೆ ಪೂರ್ಣಗೊಂಡಿರುವುದಾಗಿ ಬಜೆಟ್‌ನಲ್ಲಿ ಸುಳ್ಳು ಹೇಳಿ, ಜನರನ್ನು ದಾರಿ ತಪ್ಪಿಸಲಾಗುತ್ತಿದೆ ಎಂದು ಬಿಜೆಪಿ ಸದಸ್ಯರು ಆಡಳಿತ ಪಕ್ಷವನ್ನು ತರಾಟೆಗೆ ತೆಗೆದುಕೊಂಡರು.

ಪಾಲಿಕೆ ವಿಪಕ್ಷ ನಾಯಕ ಆರ್.ಎಲ್. ಶಿವಪ್ರಕಾಶ್ 24 ತಾಸು ಎಲ್ಲಿ ನೀರು ಬರುತ್ತಿದೆ ತೋರಿಸಿ ಎಂದು ಹೇಳಿದರು. ಮಾಜಿ ಮೇಯರ್ ಎಸ್.ಟಿ. ವೀರೇಶ್, ಖಾಲಿ ಮೀಟರ್‌ಗಳು ಓಡ್ತಿವೆ. ಸಾವಿರಾರು ರೂಪಾಯಿ ಬಿಲ್ ಬರ್ತಿದೆ ಎಂದು ಕಿಡಿಕಾರಿದರು.

ಮಧ್ಯ ಪ್ರವೇಶಿಸಿದ ಎ. ನಾಗರಾಜ್, 34 ಝೋನ್ ಗಳಲ್ಲಿ ಕಾಮಗಾರಿ ಪೂರ್ಣವಾಗಿ ನೀರು ನೀಡಲಾಗುತ್ತಿದೆ ಎಂದರು. ಜನರಲ್ಲಿ ಮಾಹಿತಿ ಕೊರತೆಯಿಂದ ನಲ್ಲಿ ಬಂದ್ ಮಾಡದ ಕಾರಣ (4ನೇ ಪುಟಕ್ಕೆ)

### ಶುಲ್ಕ ಭಾಗ್ಯ

**ಈ ಬಾರಿಯ ಬಜೆಟ್‌ನಲ್ಲಿ 6 ಕೋಟಿ ರೂ. ನೀರಿನ ಕಂದಾಯ ವಸೂಲಿ ಗುರಿ ಹೊಂದಲಾಗಿದೆ. ಪ್ರಮುಖ ರಸ್ತೆ, ವೃತ್ತಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಅನುಷ್ಠಾನಗೊಳಿಸಿ ಇದರಿಂದ 25 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ. ಅಲ್ಲದೇ ಉದ್ಯಾನವನಗಳಿಗೂ ಪ್ರವೇಶ ಶುಲ್ಕ ವಿಧಿಸಿ 5 ಲಕ್ಷ ರೂ. ಆದಾಯ ಸಂಗ್ರಹಿಸುವ ಯೋಜನೆ ಇದೆ.**



# ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಸೇರಿದಂತೆ ಮೂವರಿಗೆ ಜೈಲು



**ಬ್ಯಾಂಕ್ ವಂಚನೆ ಪ್ರಕರಣ**

ಬೆಂಗಳೂರು,ಫೆ.6- ಬ್ಯಾಂಕ್ ವಂಚನೆ ಪ್ರಕರಣದಲ್ಲಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಹಾಗೂ ಇತರರಿಗೆ ಮೂರು ವರ್ಷ ಜೈಲು ಹಾಗೂ ತಲಾ ಒಂದು ಲಕ್ಷ ರೂ. ದಂಡ ವಿಧಿಸಿ ನ್ಯಾಯಾಲಯ ಶಿಕ್ಷೆ ಪ್ರಕಟಿಸಿದೆ.

ನಕಲಿ ದಾಖಲೆ ನೀಡಿ ಕೋಟ್ಯಂತರ ರೂ.ಗಳ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೃಷ್ಣಯ್ಯ ಶೆಟ್ಟಿ ಅಲ್ಲದೆ, ಎಂ.ಟಿ.ವಿ.ರೆಡ್ಡಿ, ಶ್ರೀನಿವಾಸ್, ಮುನಿರಾಜು ಅವರನ್ನು ನ್ಯಾಯಾಲಯ ಅಪರಾಧಿಗಳೆಂದು ಘೋಷಿಸಿದೆ. ಪ್ರಕರಣದ ವಿಚಾರಣೆ ನಡೆಸಿದ ನಗರದ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶ ಗಜಾನನ ಭಟ್, ಶಿಕ್ಷೆ ಪ್ರಕಟಿಸಿದ್ದಾರೆ.

ನ್ಯಾಯಾಧೀಶರು ಶಿಕ್ಷೆ ಪ್ರಕಟಿಸುತ್ತಿದ್ದಂತೆ ಕೃಷ್ಣಯ್ಯ ಶೆಟ್ಟಿ ಪರ ವಕೀಲ ನಾಗೇಂದ್ರ ನಾಯಕ್ ಮನವಿಯಂತೆ, ಶಿಕ್ಷೆಯನ್ನು ಒಂದು ತಿಂಗಳು ಅಮಾನತ್ತಿನಲ್ಲಿಟ್ಟು ಅಪರಾಧಿಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದ್ದಲ್ಲದೆ, ಪ್ರತಿಯೊಬ್ಬರು ಐದು ಲಕ್ಷ ರೂ. (4ನೇ ಪುಟಕ್ಕೆ)

# ಭ್ರಷ್ಟಾಚಾರ : ಪಾಕ್ ಪ್ರಧಾನಿ ಮುಕ್ತ



ಲಾಹೋರ್,ಫೆ. 6 - 8 ವರ್ಷಗಳ ಹಳೆಯ ಸಕ್ಕರೆ ಮಿಲ್ಲುಗಳ ಭ್ರಷ್ಟಾಚಾರ ಪ್ರಕರಣದಿಂದ ಪ್ರಧಾನಮಂತ್ರಿ ಶೆಬಾಜ್ ಷರೀಫ್ ಹಾಗೂ ಅವರ ಪುತ್ರ ಹಂಜಾ ಶೆಬಾಜ್ ಅವರನ್ನು ದೋಷ ಮುಕ್ತಗೊಳಿಸಿ ಪಾಕಿಸ್ತಾನದ ನ್ಯಾಯಾಲಯ ಆದೇಶ ಹೊರಡಿಸಿದೆ.

ಭ್ರಷ್ಟಾಚಾರ ವಿರೋಧಿ ನ್ಯಾಯಾಲಯದ ನ್ಯಾಯಾಧೀಶ ಸರ್ದಾರ್ ಮಹಮ್ಮದ್ ಇಕ್ಬಾಲ್ ಅವರು ತೀರ್ಪು ನೀಡಿದ್ದು, ರಂಜಾನ್ ಷುಗರ್ ಮಿಲ್ಸ್ ಭ್ರಷ್ಟಾಚಾರ ಪ್ರಕರಣದಲ್ಲಿ ಪ್ರಧಾನಿ ಹಾಗೂ ಪುತ್ರ ನಿರ್ದೋಷಿ ಎಂದು ತಿಳಿಸಿದ್ದಾರೆ. ಪಾಕ್ ಪ್ರಧಾನಿಯ ವಿರುದ್ಧ ನಾನು ದೂರು ನೀಡಿರಲಿಲ್ಲ ಹಾಗೂ ಈ ಬಗ್ಗೆ ಕ್ರಮ ತೆಗೆದುಕೊಂಡಿರುವುದು ನನಗೆ ತಿಳಿದೇ ಇರಲಿಲ್ಲ ಎಂದು ದೂರುದಾರ ಜುಲ್ಫೀಕರ್ ಅಲಿ (2ನೇ ಪುಟಕ್ಕೆ)

## ಶ್ರೀಮತಿ ಶಶಿಮುಖಿ ಮೋತಿ ಪಂಚಾಕ್ಷರಪ್ಪ ನಿಧನ



ಮಾಜಿ ಶಾಸಕರಾದ ಶ್ರೀ ಯಜಮಾನ್ ಮೋತಿ ವೀರಣ್ಣನವರ ಸಹೋದರರಾದ ಶ್ರೀ ಪಂಚಾಕ್ಷರಪ್ಪ ಮೋತಿ ಅವರ ಧರ್ಮಪತ್ನಿ ಮತ್ತು ನಮ್ಮ ಸಹೋದರಿ

**ಶ್ರೀಮತಿ ಶಶಿಮುಖಿ ಪಂಚಾಕ್ಷರಪ್ಪ ಮೋತಿ**

ಅವರು, ದಿನಾಂಕ 06.02.2025 ರ ಗುರುವಾರ ಮುಂಜಾನೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 79 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.02.2025ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ಶಾಮನೂರಿನ ಗ್ಲಾಸ್ ಹೌಸ್ ಬಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಶ್ರೀಮತಿ ಶೋಭ ಮತ್ತು ಪಲ್ಲಾಗಟ್ಟೆ ಶಿವಾನಂದಪ್ಪ ಹಾಗೂ ಮಕ್ಕಳು
ನಿರ್ದೇಶಕರು, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್
ಮೊ. : 98440 67292






|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ವಾಸಿ **ಸಣ್ಣಗೌಡ್ರು ಶ್ರೀ ಎಸ್.ಜಿ. ಜಯದೇವಪ್ಪ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 31.01.2025ನೇ ಶುಕ್ರವಾರ ಬೆಳಗಿನ ಜಾವ 02.15ಕ್ಕೆ ಶ್ರೀ ಎಸ್.ಜಿ. ಜಯದೇವಪ್ಪನವರ ಧರ್ಮಪತ್ನಿಯಾದ

**ಶ್ರೀಮತಿ ಗಿರಿಜಮ್ಮ ಸಣ್ಣಗೌಡ್ರು**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು** ದಿನಾಂಕ : 08.02.2025ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ತಾಲ್ಲೂಕು ಹಿರೆತೊಗಲೇರಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಪತಿ, ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಅಳಿಯ, ಸೊಸೆಯಂದಿರು, ಸಣ್ಣಗೌಡ್ರು ವಂಶಸ್ಥರು, ಹಿರೆತೊಗಲೇರಿ ಗ್ರಾಮಸ್ಥರು ಹಾಗೂ ಬಂಧು ಮಿತ್ರರು. ಮೊ. : 94497 79375, 94481 34919

ವಿ.ಸೂ. : ವಿಶೇಷ ಆಹ್ವಾನ ಪತ್ರಿಕೆ ತಲುಪದೇ ಇರುವವರು, ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಐದನೇ ವರ್ಷದ ಪುಣ್ಯಸ್ಮರಣೆ



**ಡಾ ಶಾರದ ಶೆಟ್ಟಿ**

ಜನನ : 07.05.1938 ನಿಧನ : 07.02.2020

ಮರಣವು ಈ ಭೌತಿಕ ಶರೀರಕ್ಕೆ ಮಾತ್ರ..
ಶರೀರ ಅಂತ್ಯವಾದರೂ ಆತ್ಮ ಶಾಶ್ವತ..
ನೀವು ಕಣ್ಣು ಮುಂದೆ ಇಲ್ಲವಾದರೂ, ನಮ್ಮೆಲ್ಲರ
ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ.
ನೀವು ನಡೆದ ದಾರಿಯಲ್ಲೇ ನಾವು ನಡೆಯುತ್ತಾ
ಇದ್ದೇವೆ. ನಿಮ್ಮ ನೆನಪು,
ಒಡನಾಟ ಸದಾ ನಮ್ಮಲ್ಲಿದೆ. ನಿಮಗಿದೋ
ನಮ್ಮ ಭಾವಪೂರ್ಣ ಶ್ರದ್ಧಾಂಜಲಿಗಳು.

ಮಗ : ಡಾ|| ಸಭೋದ್ ಶೆಟ್ಟಿ, ಸೊಸೆ : ಡಾ|| ರಶ್ಮಿ ಶೆಟ್ಟಿ
ಮಗಳು : ಡಾ|| ಸಹನಾ ಹೆಗಡೆ, ಅಳಿಯ : ಶ್ರೀ ಅಶೋಕ್ ಹೆಗಡೆ,
ಮೊಮ್ಮಕ್ಕಳು ಹಾಗೂ ಸಿಬ್ಬಂದಿ ವರ್ಗ
ಸಿಟಿ ಮೆಡಿಕಲ್ ಸೆಂಟರ್, ದಾವಣಗೆರೆ.




# ರಾಣೇಬೆನ್ನೂರಿನಲ್ಲಿ ಮೂರು ದಿನ ಕರ್ನಾಟಕ ವೈಭವ ವೈಚಾರಿಕ ಹಬ್ಬ




ಇಲ್ಲಿನ ಬಸ್ ನಿಲ್ದಾಣದ ಎದುರಿನ ರಾಜರಾಜೇಶ್ವರಿ ಮಹಿಳಾ ಮಹಾವಿದ್ಯಾಲಯದ ಆವರಣದಲ್ಲಿ ಕರ್ನಾಟಕ ವೈಭವ ವೈಚಾರಿಕ ಹಬ್ಬ ಸಮಾರಂಭವನ್ನು ಇಂದಿನಿಂದ ಮೂರು ದಿನಗಳ ಕಾಲ ಆಯೋಜಿಸಲಾಗಿದೆ ಎಂದು ಸಂಯೋಜಕ ಕೆ.ಎನ್. ಪಾಟೀಲ್ ತಿಳಿಸಿದ್ದಾರೆ.

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಶ್ರೀಗಳ ಸಾನ್ನಿಧ್ಯದಲ್ಲಿ ಉಪ-ರಾಷ್ಟ್ರಪತಿ ಜಗದೀಪ ಧನಕರ್ ಉದ್ಘಾಟಿಸುವರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅತಿಥಿಗಳು, ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಆಶಯ ಭಾಷಣ ಮಾಡುವರು. ಮೈಸೂರ ವಿ.ವಿ. ಕುಲಪತಿ ಎಸ್.ವಿ. ಹಲಸೆ, ಪ್ರಜ್ಞಾ ಪ್ರವಾಹದ ರಘು ನಂದನ ಉಪಸ್ಥಿತರಿದ್ದರು.

ಶಾಸಕ ಪ್ರಕಾಶ ಕೋಳಿವಾಡ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ಚಿಣ್ಣರ ಗೋಷ್ಠಿ, ಸಂಜೆ ಸಾರ್ವಜನಿಕ ಕಾರ್ಯಕ್ರಮದ ನಂತರ ನಡೆಯುವ ಹಾಸ್ಯ ಸಂಜೆಯಲ್ಲಿ ಗಂಗಾವತಿ ಪ್ರಾಣೇಶ ಅವರಿಂದ ಹಾಸ್ಯ ಭಾಷಣ ನಂತರ ಕಲಾ ಪ್ರದರ್ಶನ ನಡೆಯುವುದು.

ನಾಳೆ ಶನಿವಾರ ಸೂಲಿಬೆಲೆ ಚಕ್ರವರ್ತಿ ಅಧ್ಯಕ್ಷತೆಯಲ್ಲಿ ಯುವ ಗೋಷ್ಠಿ ನಡೆಯುವುದು. ಮದ್ಯಾಹ್ನ ತೇಜಸ್ವಿನಿ ಅನಂತಕುಮಾರ್ ಹಾಗೂ ಅಲಕಾ ಇನಾಮದಾರ ನೇತೃತ್ವದಲ್ಲಿ ಮಹಿಳಾ ಗೋಷ್ಠಿ, ಸಂಜೆ ಸಾರ್ವಜನಿಕ ಕಾರ್ಯಕ್ರಮದ ನಂತರ ಕಲಾ ಪ್ರದರ್ಶನದಲ್ಲಿ ರಾಮು ಮೂಲಗಿ ಅವರಿಂದ ಜನಪದ ಹಾಡುಗಳು.

ನಾಡಿದ್ದು ದಿನಾಂಕ 9 ರಂದು ಬೆಳಿಗ್ಗೆ ಕೃಷಿ ಪದವೀಧರರ ಸಂಘದ ಸಹಯೋಗದಲ್ಲಿ 'ಹೊನ್ನ ಬಿತ್ತೇವು ಜಗಕೆಲ್ಲ' ರೈತ ಗೋಷ್ಠಿಯಲ್ಲಿ ಕಲಬುರ್ಗಿ ವಿಕಾಸ ಅಕಾಡೆಮಿ ಅಧ್ಯಕ್ಷರು ಬಸವರಾಜ ಸೇಡಂ ಭಾಷಣ, ಸಂಜೆ ಸಮಾರೋಪ ಸಮಾರಂಭ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಸಂಸದ ಬಸವರಾಜ ಬೊಮ್ಮಾಯಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಂಜಮ್ಮ ಜೋಗತಿ ಭಾಗವಹಿಸುವರು. ಪ್ರಜ್ಞಾ ಪ್ರವಾಹದ ಸಂಯೋಜಕ ರಘುನಂದನ ಅವರಿಂದ ಸಮಾರೋಪದ ನುಡಿಗಳು. ನಂತರ ಸಂಗೀತ ಕಲಾವಿದೆ ಸಂಗೀತಾ ಕಟ್ಟಿ ಅವರಿಗೆ 'ಸರ್ವಜ್ಞ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ನಡೆಯಲಿದೆ.

# ಐರಣಿ ಹೊಳೆಮಠದಲ್ಲಿ ನಾಳೆಯಿಂದ ಮೂರು ದಿನ ನೂತನ ಸಿದ್ಧಾರೂಢ ಶ್ರೀಗಳ ಪಟ್ಟಾಭಿಷೇಕ ಕಾರ್ಯಕ್ರಮ

ರಾಣೇಬೆನ್ನೂರು, ಫೆ.6- ನಾಡಿದ್ದು ದಿನಾಂಕ 8 ರಿಂದ 10 ರವರೆಗೆ ತಾಲ್ಲೂಕಿನ ಐರಣಿ ಹೊಳೆಮಠದ ನೂತನ ಸ್ವಾಮೀಜಿ ಪಟ್ಟಾಭಿಷೇಕ, ತುಲಾಭಾರ, ಧರ್ಮಸಭೆ ಸಮಾರಂಭವು ನಾಡಿನ ಹರ, ಗುರು, ಚರ ಮೂರ್ತಿಗಳ ಸಾನ್ನಿಧ್ಯ ಹಾಗೂ ಗಣ್ಯರ ಭಾಗವಹಿಸುವಿಕೆಯಲ್ಲಿ ನಡೆಯಲಿದೆ.

8 ಮತ್ತು 9 ರಂದು ಸನ್ಯಾಸ ದೀಕ್ಷೆ ನಂತರ ಬಸವರಾಜ ಶ್ರೀಗಳ 75ನೇ ವರ್ಷದ ಸ್ಮರಣೆಗೆ 75 ಭಕ್ತರಿಂದ ನಾಣ್ಯಗಳ ತುಲಾಭಾರ, ಅಖಂಡ ಶಿವ ಭಜನೆ, ಶ್ರೀ ಸಿದ್ಧಾರೂಢರ ಜ್ಯೋತಿ ರಥಯಾತ್ರೆಯ ಸ್ವಾಗತ, ಸಂಜೆ ಧರ್ಮಸಭೆ ನಡೆಯಲಿದೆ.

ದಿನಾಂಕ 10 ರಂದು ಬೆಳಿಗ್ಗೆ ನೂತನ ಶ್ರೀ ಸಿದ್ಧಾರೂಢ ಸ್ವಾಮಿಗಳ ಪಟ್ಟಾಭಿಷೇಕವು ಜೋಡಕುರಳಿ ಚಿದ್ಭವಾನಂದ ಭಾರತೀ ಸ್ವಾಮೀಜಿ ಹಾಗೂ ದಾವಣಗೆರೆ ಜಡೆ ಸಿದ್ಧಾಶ್ರಮದ ಶಿವಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆಯಲಿದೆ.

ನಂತರ ನಡೆಯುವ ಧರ್ಮಸಭೆಯನ್ನು ಶಾಸಕ ಪ್ರಕಾಶ ಕೋಳಿವಾಡ ಉದ್ಘಾಟಿಸುವರು.



ಇಂಚಲ ಶಿವಾನಂದ ಭಾರತಿ ಶ್ರೀಗಳು, ಬೀದರ ಶಿವಕುಮಾರ ಶ್ರೀಗಳು, ವಿಜಯಪುರ ಸಿದ್ದಾರೂಢ ಶ್ರೀ ಗಳು, ಕಾಗಿನೆಲೆ ನಿರಂಜನಾನಂದ ಪುರಿ ಶ್ರೀಗಳು, ರಾಜನಹಳ್ಳಿ ಪ್ರಸನ್ನಾನಂದ ಶ್ರೀಗಳು, ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀಗಳು, ಹಂಪಿ ಗಾಯತ್ರಿ ಪೀಠದ ದಯಾನಂದ ಶ್ರೀಗಳು, ಹರಿಹರ ವಚನಾನಂದ ಶ್ರೀ ಗಳು, ಶಾಂತಭೀಷ್ಮ ಶ್ರೀಗಳು, ನಗರದ ಮಲ್ಲಯ್ಯ ಶ್ರೀಗಳು ಸೇರಿದಂತೆ ನಾಡಿನ ವಿವಿಧ ಮಠಾಧೀಶರು ಪಾಲ್ಗೊಳ್ಳುವರು.

ಉಪಸಭಾಪತಿ ರುದ್ರಪ್ಪ ಲಮಾಣಿ, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಬಸವರಾಜ ಶಿವಣ್ಣನವರ, ಶ್ರೀ ನಿವಾಸ ಮಾನೆ, ಬಿ.ಪಿ ಹರೀಶ್, ಯಾಶೀರ್ ಖಾನ್ ಪಠಾಣ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಡಾ.ಬಸವರಾಜ ಕೇಲಗಾರ, ಮಾಜಿ ಮಂತ್ರಿ ಕೆ.ಎಸ್.ಈಶ್ವರಪ್ಪ, ಕಾಂಗ್ರೆಸ್ ಮುಖಂಡ ಸೀತಾರಾಮರೆಡ್ಡಿ, ವರ್ತಕರ ಸಂಘದ ಅಧ್ಯಕ್ಷ ಬಸವರಾಜ ಪಟ್ಟಣಶೆಟ್ಟಿ ಮತ್ತಿತರರು ಭಾಗವಹಿಸುವರು.

# ಇಂದು 'ಶ್ರೀಕ್ಷೇತ್ರ ಇಟಗಿಯ ಇತಿಹಾಸ' ಪುಸ್ತಕ ಪರಿಚಯ

ನಗರದ ರಾಷ್ಟ್ರೋತ್ಥಾನ ಶಾಲೆಯಲ್ಲಿ ಇಂದು ಸಂಜೆ 4 ಗಂಟೆಗೆ ಶ್ರೀ ಕ್ಷೇತ್ರ ಇಟಗಿಯ ಇತಿಹಾಸ ಪುಸ್ತಕ ಪರಿಚಯ ಕಾರ್ಯಕ್ರಮ ನಡೆಯಲಿದೆ.

ಇತಿಹಾಸ ಪ್ರಸಿದ್ಧ ಇಟಗಿ ರಾಮೇಶ್ವರ ದೇವರ ಬ್ರಹ್ಮಕಲಶೋತ್ಸವ ನಿಮಿತ್ತ ನಡೆಯುವ ಈ ಪರಿಚಯ ಕಾರ್ಯಕ್ರಮವನ್ನು ಹೆಗಡೆ ಡಯಾಗ್ನಸ್ಟಿಕ್ ಸೆಂಟರ್‌ನ ಡಾ. ಎಸ್.ಆರ್. ಹೆಗಡೆ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ದಿನೇಶ್ ಕೆ. ಶೆಟ್ಟಿ, ಡಾ. ಶಶಿಕುಮಾರ್ ಮೆಹರ್ವಾಡೆ, ಕುಸಮ ಶೆಟ್ರು, ಸಂಪನ್ನ ಮುತಾಲಿಕ್ ಉಪಸ್ಥಿತರಿರುವರು.

ಅರುಣ್ ಹೆಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಚಂದ್ರಶೇಖರ ಹೆಗಡೆ ಕೊಡ್ತಗಣಿ, ಸುರೇಶ್, ಗಿರೀಶ್ ಮುದೇಗೌಡ್ರು, ಕೆ.ಬಿ. ಕೊಟ್ರೇಶ್, ಐ.ಎಂ. ರಾಮಚಂದ್ರ, ಸತೀಶ್ಚಂದ್ರ, ಪ್ರಹ್ಲಾದ್ ಭಟ್, ದತ್ತಾತ್ರೇಯ ಭಟ್, ಜಯಣ್ಣ, ಡಾ. ಶಶಿಕಾಂತ್ ಎಂ.ಸಿ., ನಾಗರಾಜ್, ಮಲ್ಯಾಡಿ ಪ್ರಭಾಕ ಶೆಟ್ಟಿ ಪ್ರಸಾದ್ ಬಂಗೇರ್, ಡಾ. ಸುಬ್ಬರಾವ್, ಅನಂತ ಹೆಗಡೆ ಓಜಗಾರ್, ವಿಶ್ವನಾಥ್ ಭಟ್ ಸಾರಂಗ, ಶಿವಾನಂದ ಹೆಗಡೆ, ಭಾಸ್ಕರ ಭಟ್ ಮತ್ತಿತರರರು ಉಪಸ್ಥಿತರಿರುವರು.

# 'ಅನ್‌ಲಾಕ್ ರಾಘವ' ಚಿತ್ರ ಇಂದು ತೆರೆಗೆ

ದಾವಣಗೆರೆ ಜಿಲ್ಲೆಯ ಹೆಮ್ಮೆಯ ಪ್ರತಿಭೆ ಮಿಲಿಂದ್ ಗೌತಮ್ ಅಭಿನಯಿಸಿರುವ ಚಿತ್ರ 'ಅನ್‌ಲಾಕ್ ರಾಘವ' ರಾಜ್ಯಾದ್ಯಂತ ಚಲನಚಿತ್ರ ಮಂದಿರಗಳಲ್ಲಿ ಇಂದು ಬಿಡುಗಡೆಯಾಗುತ್ತಿದೆ.

ದಾವಣಗೆರೆ ಜಿಲ್ಲೆಯ ಮತ್ತೊಂದು ಪ್ರತಿಭೆ ಮಿಲಿಂದ್ ಗೌತಮ ನಾಯಕ ನಟನಾಗಿ ನಟಿಸಿದ್ದಾರೆ. ಚನ್ನಗಿರಿ ತಾಲ್ಲೂಕಿನ ಮಂಜುನಾಥ್ ಅವರ ಪುತ್ರ ಮಿಲಿಂದ್ ಅಭಿನಯದ ಅನ್‌ಲಾಕ್ ರಾಘವ ತೆರೆಗೆ ಬರುತ್ತಿದೆ.

# ಅತ್ತಿಗೆರೆ : ಕೇಸರಿ ಪಬ್ಲಿಕ್ ಸ್ಕೂಲ್‌ನ ಕಟ್ಟಡದ ಉದ್ಘಾಟನೆ

ದಾವಣಗೆರೆ ತಾಲ್ಲೂಕಿನ ಅತ್ತಿಗೆರೆ ಗ್ರಾಮದಲ್ಲಿ ಶ್ರೀ ಕೇಸರಿ ವಿದ್ಯಾಸಂಸ್ಥೆಯ ಶ್ರೀ ಕೇಸರಿ ಪಬ್ಲಿಕ್ ಸ್ಕೂಲ್‌ನ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ಇಂದು ಮಧ್ಯಾಹ್ನ 12 ಕ್ಕೆ ನಡೆಯಲಿದೆ.

ಶಾಲಾ ಕಟ್ಟಡದ ಉದ್ಘಾಟನೆಯನ್ನು ಪಾಂಡೋಮಟ್ಟಿಯ ಶ್ರೀ ಡಾ. ಗುರುಬಸವ ಮಹಾಸ್ವಾಮೀಜಿ ನೆರವೇರಿಸುವರು. ಶ್ರೀ ಕೇಸರಿ ವಿದ್ಯಾಸಂಸ್ಥೆಯ ಅಧ್ಯಕ್ಷ ಎ.ಓ. ರವಿ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಎಸ್. ಬಸವಂತಪ್ಪ, ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕ ಎಂ. ಬಸವರಾಜನಾಯ್ಕ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹೆಚ್.ಎಸ್. ಮುರುಗೇಂದ್ರಪ್ಪ, ಪ್ರಗತಿಪರ ರೈತ ಹೆಚ್.ಬಿ. ಮುರುಗೇಶಪ್ಪ ಅವರುಗಳು ಆಗಮಿಸಲಿದ್ದಾರೆ.

# ಶಿಕ್ಷಕರು ಮಕ್ಕಳಲ್ಲಿ ಮನೋಬಲ ಹೆಚ್ಚಿಸಬೇಕು



**ಹರಿಹರದಲ್ಲಿನ ಮಕ್ಕಳೊಂದಿಗೆ ಸಂವಾದದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಎಂ. ಅಪರ್ಣ ಕೊಳ್ಳ**

ಹರಿಹರ, ಫೆ. 6 - ವಿವಿಧ ಕಾರಣಗಳಿಂದ ಅಪ್ರಾಪ್ತ ಮಕ್ಕಳನ್ನು ಮದುವೆ ಮಾಡಲು ಮುಂದಾಗುತ್ತಿರುವುದನ್ನು ಹಾಗೂ ಅವರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ ತಡೆಯಲು ಶಾಲೆಯಲ್ಲಿ, ಮಕ್ಕಳಿಗೆ ಶಿಕ್ಷಕರು ಮನೋಬಲ ಹೆಚ್ಚಿಸಲು ಮುಂದಾಗಬೇಕೆಂದು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಎಂ. ಅಪರ್ಣ ಕೊಳ್ಳ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಆಯೋಗ (ಬೆಂಗಳೂರು), ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ತಾಲ್ಲೂಕು ಕಾನೂನು ಸೇವಾ ಸಮಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರುಗಳ ಸಂಯುಕ್ತ ಆಶ್ರಯದಲ್ಲಿ ನಗರದ ಗುರು ಭವನದಲ್ಲಿ ಏರ್ಪಡಿಸಿದ್ದ, 'ಬಾಲ್ಯ ವಿವಾಹ ಮತ್ತು ಪೋಕ್ಸೋ ಕಾಯ್ದೆ ತರಬೇತಿ' ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು ಮಾತನಾಡಿದರು.

ಬಾಲ್ಯ ವಿವಾಹ ತಡೆಯಲು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಕೇಂದ್ರ, ರಾಜ್ಯ ಸರ್ಕಾರ ಹಲವಾರು ಕಾನೂನು-ಕಾಯ್ದೆ ಜಾರಿಗೊಳಿಸಿದ್ದು ಇರುತ್ತದೆ. ಆದರೆ, ಅವುಗಳನ್ನು ಬಳಕೆ ಮಾಡಿಕೊಳ್ಳುವಲ್ಲಿ ಅನೇಕರು ಹಿಂದೇಟು ಹಾಕುತ್ತಿದ್ದಾರೆ.

ಈ ಕುರಿತು ಶಾಲೆಯಲ್ಲಿ ಗೋಡೆಗಳ ಮೇಲೆ ಹಾಗೂ ಪ್ರಮುಖ ಸ್ಥಳಗಳಲ್ಲಿ ರಾಜ್ಯ ಮಕ್ಕಳ ಸಹಾಯ ವಾಣಿ ಸಂಖ್ಯೆ 1098ನ್ನು ಗೋಡೆಯ ಮೇಲೆ ಬರೆಯಿಸಬೇಕು. ಮಕ್ಕಳ ಸುರಕ್ಷತೆ ಹಾಗೂ ಆರೈಕೆ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ನಿರ್ಲಕ್ಷ ತೊರುವುದು ಮಕ್ಕಳಿಗೆ ನಾವು ತೋರಿಸಿದ ನಿರ್ಲಕ್ಷ್ಯತನದಿಂದ ಮಕ್ಕಳ ಮೇಲೆ ದೌರ್ಜನ್ಯ ಹೆಚ್ಚಾಗುತ್ತದೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಿವಿಲ್ ನ್ಯಾಯಾಧೀಶರು ಅಧ್ಯಕ್ಷರು ತಾಲ್ಲೂಕು ಕಾನೂನು ಸೇವಾ ಸಮಿತಿಯ ಪದ್ಮಶ್ರೀ ಮುನ್ನಳ್ಳಿ ಇವರು ಮಾತನಾಡಿ, ಪೋಷಕರು ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಬೇಕು. ಮಕ್ಕಳಿಗೆ ಶಾಲೆಗಳಲ್ಲಿ ಕೌನ್ಸಿಲಿಂಗ್ ಆಪ್ತ ಸಮಾಲೋಚನೆ ಮಾಡಬೇಕು. ಮಕ್ಕಳ ಕಾಯ್ದೆಗಳು ಅನುಕರನಗೊಳ್ಳೇಕು. ಶಾಲೆಗಳಲ್ಲಿ ಹೆಚ್ಚಿನ ಅರಿವು ಕಾ ರ್ಯ ಕ್ರ ಮ ವ ನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ತಹಶೀಲ್ದಾರ್ ಕೆ.ಎಂ. ಗುರುಬಸವರಾಜ ಮಾತನಾಡಿ, ನಮ್ಮಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ, ತಾಲ್ಲೂಕಿನ ಭಾನುವಳ್ಳಿ ಗ್ರಾಮದಲ್ಲಿ ಹೆಚ್ಚು ಬಾಲ್ಯ ವಿವಾಹ ಪ್ರಕರಣಗಳು ಕಂಡು ಬಂದಿವೆ ಎಂದು ಹೇಳಿದರು.

18 ವರ್ಷದೊಳಗಿನ ಹೆಣ್ಣು ಮಕ್ಕಳ ವಿವಾಹಕ್ಕೆ ಮುಂದಾಗಿರುವುದು ಕಂಡು ಬಂದಲ್ಲಿ ರಾಜ್ಯ ಮಕ್ಕಳ ಸಹಾಯವಾಣಿ 1098ಕ್ಕೆ ತಿಳಿಸಬೇಕು ಎಂದು ಕರೆ ನೀಡಿದರು.

ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಕೃಷ್ಣಪ್ಪ ಬಿಎಲ್‌ಆರ್ ಬಸವರಾಜಯ್ಯ, ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ. ಪೂರ್ಣಿಮಾ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಅಬ್ದುಲ್ ಖಾದರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಪರಿವೀಕ್ಷಣಾಧಿಕಾರಿ ಪ್ರಕಾಶ ಬಿ.ಎಸ್, ಪಿಎಸ್‌ಐ ಶ್ರೀಪತಿ ಗಿನ್ನಿ, ಎಎಸ್‌ಐ ವಿಜಯ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ ಟಿ.ಎನ್, ಜಿಲ್ಲಾ ಮಕ್ಕಳ ಘಟಕದ ವೀರೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ತುಮ್ಮಿನಕಟ್ಟೆಯಲ್ಲಿ ಇಂದು ಜಾತ್ರೋತ್ಸವ

ರಾಣೇಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆ ಗ್ರಾಮದ ಬೆಲ್ಲದ ಪತೇಯಲ್ಲಿರುವ ಶ್ರೀ ಬಸವೇಶ್ವರ ದೇವರ ಜಾತ್ರಾ ಮಹೋತ್ಸವ ಇಂದು ನಡೆಯಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಬಸವೇಶ್ವರ ದೇವರ ರಥೋತ್ಸವ ಹಾಗೂ ಗುಗ್ಗಳ ಕಾರ್ಯಕ್ರಮವು ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಕಬ್ಬಿಣ ಕಂತಿಮಠ, ರಟ್ಟೆಹಳ್ಳಿ ಶ್ರೀಗಳಿಂದ ಚಾಲನೆಗೊಳ್ಳಲಿದೆ. ಮಧ್ಯಾಹ್ನ 1ಕ್ಕೆ ದೇವಸ್ಥಾನದ ಆವರಣದಲ್ಲಿ ಶ್ರೀಮತಿ ರಿಂದವ್ವ ಶಿಗ್ಲಿ ಹಾಗೂ ಕುಟುಂಬದವರಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಎತ್ತುಗಳ ಮೆರವಣಿಗೆ ನೆರವೇರಲಿದೆ. ಸಂಜೆ 6ರಿಂದ ಧರ್ಮಸಭೆ ನಡೆಯಲಿದೆ.

## ನಗರದ ಎ.ಆರ್.ಜಿ. ಕಾಲೇಜಿನಲ್ಲಿ ಇಂದು

ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಕಾಲೇಜು ಆವರಣದಲ್ಲಿರುವ ಡಾ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಎಸ್.ಜಿ. ಕರಿಸಿದ್ದಪ್ಪ, ಪ್ರೊ. ಸಿ.ಹೆಚ್.ಮುರುಗೇಂದ್ರಪ್ಪ, ಮಂಜು ಮೊಗವೀರ, ಡಾ.ಜಿ.ಬಿ.ಬೋರಯ್ಯ ಆಗಮಿಸಲಿದ್ದು, ಎ.ಜಿ. ಮಂಜುನಾಥ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಕೆ. ಬೊಮ್ಮಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ.

## 9 ರಂದು ರಾಜ್ಯಮಟ್ಟದ ಮುಕ್ತ ಚೆಸ್ ಪಂದ್ಯಾವಳಿ

ದಾವಣಗೆರೆ, ಫೆ. 6- ಜಿಲ್ಲಾ ಚೆಸ್ ಅಸೋಸಿಯೇಷನ್ ಹಾಗೂ ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 9 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಲಯನ್ಸ್ ಭವನದಲ್ಲಿ ರಾಜ್ಯಮಟ್ಟದ ಮುಕ್ತ ಚದುರಂಗ (ಚೆಸ್) ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಷನ್ ಕಾರ್ಯದರ್ಶಿ ಕೆ.ಎಸ್. ಸತೀಶ್ಚಂದ್ರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ನಾಳೆ ದಿನಾಂಕ 7 ಹೆಸರು ನೋಂದಾಯಿಸಲು ಕೊನೆ ದಿನ. ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಹಾಗೂ ಲಯನ್ಸ್ ಕ್ಲಬ್ ಪದಾಧಿಕಾರಿಗಳಾದ ಎ.ಎಂ. ಹೆಗಡೆ, ಎಸ್.ಜಿ.ಉಳುವಯ್ಯ, ಶ್ರೀಪಾದ ಹೆಗಡೆ, ಚಂದ್ರಪ್ಪ ಉಪಸ್ಥಿತರಿದ್ದರು.

## ಹೊನ್ನಾಳಿಯಲ್ಲಿ ನಾಳೆ ದಿಂಡಿ ಮಹೋತ್ಸವ

ಹೊನ್ನಾಳಿ, ಫೆ.5- ಪಟ್ಟಣದ ದೊಡ್ಡಪೇಟೆ ಪಾಂಡುರಂಗ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 7ರಿಂದ 9ರ ವರೆಗೆ 107ನೇ ದಿಂಡಿ ಮಹೋತ್ಸವ ನಡೆಯಲಿದೆ ಎಂದು ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಹೆಚ್.ಪಿ ಶ್ರೀಹರ ಹೊವಳೆ ತಿಳಿಸಿದ್ದಾರೆ.


**ಶ್ರೀಮತಿ ಶಶಿಮುಖಿ ನಿಧನ**



ಮೋತಿ ವೀರಣ್ಣನವರ ಸಹೋದರ ಪಂಚಾಕ್ಷರಪ್ಪ ಮೋತಿ ಅವರ ಧರ್ಮಪತ್ನಿ

**ಶ್ರೀಮತಿ ಶಶಿಮುಖಿ (79)**

ಅವರು, ದಿನಾಂಕ 06.02.2025 ರ ಗುರುವಾರ ಬೆಳಿಗ್ಗೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.02.2025ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ. 97430 96695


# ನಾಳಿನ ವಾಲ್ಮೀಕಿ ಜಾತ್ರೆಗೆ ಭರದಿಂದ ಸಾಗಿರುವ ಸಿದ್ಧತೆ : ಶ್ರೀಗಳಿಂದ ಪರಿಶೀಲನೆ

ಮಲೇಬೆನ್ನೂರು, ಫೆ.6- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ನಾಡಿದ್ದು ದಿನಾಂಕ 8 ಮತ್ತು 9 ರಂದು ಜರುಗಲಿರುವ 7 ನೇ ವರ್ಷದ ವಾಲ್ಮೀಕಿ ಜಾತ್ರೆಗೆ ಸಿದ್ಧತೆಗಳು ಭರದಿಂದ ಸಾಗಿದ್ದು, ಶ್ರೀಗಳೇ ಖುದ್ದು ನಿಂತು ಸಿದ್ಧತೆಗಳಿಗೆ ಅಂತಿಮ ರೂಪ ನೀಡಲು ನಿರ್ದೇಶನ ನೀಡುತ್ತಿದ್ದಾರೆ.

ಗುರುವಾರ ಸಂಜೆ 'ಜನತಾವಾಣಿ' ಯೊಂದಿಗೆ ಮಾತನಾಡಿದ ಶ್ರೀ ಡಾ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು, ನಾವು ವಾಲ್ಮೀಕಿ ಜಾತ್ರೆಯನ್ನು ಜಾಗೃತಿಗಾಗಿ ಮಾಡುತ್ತಿದ್ದು, ಜಾತ್ರೆ ಮೂಲಕ ಸಂವಿಧಾನ ಬದ್ಧ ಹಕ್ಕುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಗೊಳಿಸುವಂತೆ ಸರ್ಕಾರಕ್ಕೆ ಹಕ್ಕೊತ್ತಾಯ ಮಾಡುತ್ತಾ ಬಂದಿದ್ದೇವೆ. ಇದರಿಂದ ಕೆಲವು ಒತ್ತಾಯಗಳಿಗೆ ಸ್ಪಂದನೆ ಸಿಕ್ಕಿದೆ. ಈ ವರ್ಷದ ಜಾತ್ರೆಯಲ್ಲಿ ಎಸ್ಸಿ-ಎಸ್ಟಿ ನಕಲಿ ಜಾತಿ ಪ್ರಮಾಣ ಪತ್ರ ನೀಡುವುದನ್ನು ನಿಲ್ಲಿಸುವಂತೆ ಮತ್ತು ನಕಲಿ ಜಾತಿ ಪ್ರಮಾಣ ಪತ್ರ ಪಡೆದವರಿಗೆ ಹಾಗೂ ನೀಡಿದವರಿಗೆ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯ ಮಾಡಲಾಗುವುದು.



ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಮತ್ತು ರಾಜ್ಯದಲ್ಲಿ ಬುಡಕಟ್ಟು ವಿಶ್ವವಿದ್ಯಾನಿಲಯ ಸ್ಥಾಪಿಸುವಂತೆ ಆಗ್ರಹಿಸಲಾಗುವುದು.

ರಾಜ್ಯ ಸರ್ಕಾರ ಹೆಚ್ಚಳ ಮಾಡಿರುವ ಎಸ್ಸಿ-ಎಸ್ಟಿ ಮೀಸಲಾತಿ ಪ್ರಮಾಣವನ್ನು 9 ಷೆಡ್ಯೂಲ್‌ಗೆ ಸೇರಿಸುವಂತೆ ಮತ್ತು ಅಯೋಧ್ಯೆಯಲ್ಲಿ ಲೋಕಾರ್ಪಣೆಗೊಂಡಿರುವ ಶ್ರೀರಾಮ ಮಂದಿರದಲ್ಲಿ ವಾಲ್ಮೀಕಿ, ಶಬರಿ, ಭಗೀರಥ, ವಶಿಷ್ಟ ಋಷಿಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಾಗುವುದೆಂದು ಸ್ವಾಮೀಜಿ ತಿಳಿಸಿದರು.

ಕಳೆದ 3 ತಿಂಗಳಲ್ಲಿ 30 ಜಿಲ್ಲೆಗಳ 175 ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ, ಭಕ್ತರನ್ನು ಜಾತ್ರೆಗೆ ಆಹ್ವಾನಿಸಿ ಬಂದಿದ್ದೇವೆ. ಪ್ರತಿ ತಾಲ್ಲೂಕಿನಲ್ಲಿ ವಿಎಸ್‌ಎಸ್ ಪದಾಧಿಕಾರಿಗಳನ್ನು ನೇಮಕ ಮಾಡಿದ್ದು, ಜಾತ್ರೆಯ ಕರಪತ್ರ, ಪೋಸ್ಟರ್‌ಗಳನ್ನು ತಲುಪಿಸುವುದು ಮತ್ತು ಜಾತ್ರೆಗೆ ಭಕ್ತರು ಭಕ್ತಿಯಿಂದ ನೀಡುವ ಕಾಣಿಕೆಯನ್ನು ಸಂಗ್ರಹಿಸಿ, ಮಠಕ್ಕೆ ತಂದು ಒಪ್ಪಿಸುವ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲೇ ಈ ಸಮಾಜ ನಾಡು-ನುಡಿಗಾಗಿ ಹೋರಾಟ, ಬಲಿದಾನ ಮಾಡಿದ್ದು, ಸ್ವಾತಂತ್ರ್ಯ ನಂತರ ನಮ್ಮ ಜನರು ಮುಖ್ಯವಾಹಿನಿಗೆ ಬರುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಡಾ. ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಎಂದು ಹೆಮ್ಮೆಯಿಂದ ಹೇಳುತ್ತೇವೆ. ಮೀಸಲಾತಿ, ಶಿಕ್ಷಣ, ರಾಜಕೀಯ ಪ್ರಾತಿನಿಧ್ಯದಿಂದಾಗಿ ನಾಯಕ ಸಮಾಜಕ್ಕೆ ಅನುಕೂಲವಾಗಿದೆ ಎಂದು ಸ್ವಾಮೀಜಿ ಹೇಳಿದರು.

ವಾಲ್ಮೀಕಿ ಜಾತ್ರೆ ಅರ್ಥಪೂರ್ಣ ವಾಗಲಿದ್ದು, ಸುಮಾರು 2 ಲಕ್ಷ ಜನ ಜಾತ್ರೆಯ ಸಮಾವೇಶದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಶನಿವಾರ ವಿವಿಧ ವಿಚಾರ ಗೋಷ್ಠಿಗಳನ್ನು ಹಾಗೂ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಲಾಗಿದ್ದು, ಭಾನುವಾರ ಬೆಳಿಗ್ಗೆ 9ಕ್ಕೆ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ವಾಲ್ಮೀಕಿ ರಥೋತ್ಸವದ ನಂತರ ಧಾರ್ಮಿಕ ಸಭೆ ನಡೆಯಲಿದೆ. ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆಂದು ಸ್ವಾಮೀಜಿ ತಿಳಿಸಿದರು.

ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಅಪಾರ ಜಿಲ್ಲಾಧಿಕಾರಿ ಲೋಕೇಶ್, ಡಿಎಫ್‌ಓ ಶಶಿಧರ್, ವಾಣಿಜ್ಯ ಇಲಾಖೆಯ ಉಪ ಆಯುಕ್ತ ಹೆಚ್.ಎಸ್.ಮಂಜುನಾಥ್, ಎಸಿಎಫ್ ಭರತ್, ಜಿಲ್ಲಾ ಎಸ್ಪಿ ಕಲ್ಯಾಣ ಇಲಾಖೆಯ ಅಧಿಕಾರಿ ನವೀನ್ ಮಠದ್, ಜಾತ್ರಾ ಸಮಿತಿ ಸಂಚಾಲಕ ಶ್ರೀನಿವಾಸ್ ದಾಸಕರಿಯಪ್ಪ, ಮಠದ ಧರ್ಮದರ್ಶಿಗಳಾದ ಹೊಸಪೇಟೆ ಜಂಬಯ್ಯ ನಾಯಕ, ಶಾಂತಾ ಸುರುಪುರ, ಕೆ.ಬಿ.ಮಂಜುನಾಥ್, ನಿವೃತ್ತ ಶಿಕ್ಷಕ ಜಿ ಆರ್ ನಾಗರಾಜ್, ರಾಜನಹಳ್ಳಿ ಭೀಮಣ್ಣ, ಪತ್ರಕರ್ತ ಪ್ರಕಾಶ್ ಮತ್ತಿತರರು ಈ ವೇಳೆ ಹಾಜರಿದ್ದರು.


**ಶ್ರೀಮತಿ ದುಂಡಮ್ಮ ನಿಧನ**



ದಾವಣಗೆರೆ ಸಿಟಿ, ಡಿಸಿಎಮ್ ಟೌನ್‌ಶಿಪ್, 3ನೇ ಮೇನ್, 4ನೇ ಕ್ರಾಸ್ ವಾಸಿ ದಿ. ಬಸವಂತಪ್ಪ ತಂಗಡಗಿ ಇವರ ಧರ್ಮಪತ್ನಿ

**ಶ್ರೀಮತಿ ದುಂಡಮ್ಮ**

ಇವರು ದಿನಾಂಕ : 6.2.2025ರ ಗುರುವಾರ ಮಧ್ಯಾಹ್ನ 4.30ಕ್ಕೆ ನಿಧನರಾದರು. ಮೃತರಿಗೆ 85 ವರ್ಷ ವಯಸ್ಸಾಗಿತ್ತು.

ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಶ್ರೀಮತಿ ಬಸಮ್ಮ ಮಲ್ಲಿಕಾರ್ಜುನ್ ತಂಗಡಗಿ ಹಾಗೂ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು

**ಪ್ರಥಮ ವರ್ಷದ ಪುಣ್ಯಸ್ಮರಣೆ**



**ದಿ. ಶ್ರೀಮತಿ ಗೌರಮ್ಮ ಬೆನ್ನೂರು ಮರುಳಪ್ಪ, ಆನೆಕೊಂಡ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು,
ಅಳಿಯಂದಿರು ಹಾಗೂ ಮರಿಮೊಮ್ಮಕ್ಕಳು,
ಬೆನ್ನೂರು ವಂಶಸ್ಥರು, ಆನೆಕೊಂಡ.
ಮೆ|| ಬೆನ್ನೂರು ಬಸಪ್ಪ ಪೂಹಾ ಮಿಲ್, ದಾವಣಗೆರೆ.
ಮೆ|| ಬೆನ್ನೂರು ಬಸಪ್ಪ ಇಂಡಸ್ಟ್ರೀಸ್, ದಾವಣಗೆರೆ.
ಮೆ|| ಬಿ.ಬಿ. ಎಂಟರ್‌ಪ್ರೈಸಸ್, ದಾವಣಗೆರೆ.
ಎ.ಬಿ.ಆರ್. ಎಂಟರ್ ಪ್ರೈಸಸ್, ಎ.ಬಿ.ಆರ್. & ಕೋ


## ಭ್ರಷ್ಟಾಚಾರ : ಪಾಕ್ ಪ್ರಧಾನಿ ಮುಕ್ತ

(1ನೇ ಪುಟದಿಂದ) ಅವರು ನ್ಯಾಯಾಧೀಶರ ಎದುರು ಹೇಳಿದ್ದರು.

ಪಾಕಿಸ್ತಾನದ ಸೈನ್ಯವು ಯಾವ ರೀತಿ ರಾಜಕಾರಣಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸುತ್ತದೆ ಹಾಗೂ ತನ್ನ ಜೊತೆ ಉತ್ತಮ ಸಂಬಂಧ ಹೊಂದಿರುವವರನ್ನು ಯಾವ ರೀತಿ ಪ್ರಕರಣದಿಂದ ಕೈ ಬಿಡುತ್ತದೆ ಎಂಬುದಕ್ಕೆ ಈ ಪ್ರಕರಣ ಉದಾಹರಣೆ ಎಂದು ರಾಜಕೀಯ ವಲಯದಲ್ಲಿ ಹೇಳಲಾಗುತ್ತಿದೆ.

2018ರಲ್ಲಿ ಪಾಕಿಸ್ತಾನದ ರಾಷ್ಟ್ರೀಯ ಉತ್ತರದಾಯಿತ್ವ ದಳವು ಶರೀಫ್ ಹಾಗೂ ಹಂಜಾ ವಿರುದ್ಧ ಪ್ರಕರಣ ದಾಖಲಿಸಿತ್ತು. ಉಭಯರು ಅಧಿಕಾರ ದುರ್ಬಳಕೆ ಮಾಡಿಕೊಂಡು ಬೊಕ್ಕಸಕ್ಕೆ 200 ದಶಲಕ್ಷ ರೂಪಾಯಿ ನಷ್ಟ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು.

# ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿಂದು

ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇಂದು ಸಂಜೆ 6.30 ಕ್ಕೆ 'ಶರಣ ಸಾಹಿತ್ಯ ಮತ್ತು ಸಮಾಜ' ವಿಷಯ ಕುರಿತು ಕಾರ್ಯಕ್ರಮ ನಡೆಯಲಿದೆ.

ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಧಾರವಾಡ ಮುರುಘಾ ಮಠದ ಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.


ಮುಖ್ಯ ಅತಿಥಿಗಳಾಗಿ ಸಾಹಿತಿ ಡಾ.ಹಂಪಾ ನಾಗರಾಜಯ್ಯ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗೊ.ರು. ಚನ್ನಬಸಪ್ಪ, ಮಹಾರಾಷ್ಟ್ರದ ನಾಸಿಕ್ ವಿಜ್ಞಾನಿ ಡಾ. ಶಿವಾನಂದ ಕಣವಿ, ಬೆಂಗಳೂರು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಮಹಾಂತೇಶ್ ಬೀಳಗಿ ಆಗಮಿಸಲಿದ್ದಾರೆ.

ವಿಜಯಪುರ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಡಾ.ಮಹಾಂತೇಶ್ ಬಿರಾದಾರ, ಶಾಸನಗಳು ಮತ್ತು ಹಸ್ತಪ್ರತಿ ಸಂಶೋಧಕ ಬೆಂಗಳೂರಿನ ಅಶೋಕ್ ದೊಮ್ಮಲೂರು ಉಪನ್ಯಾಸ ನೀಡುವರು.

ವಿಶೇಷ ಆಹ್ವಾನಿತರಾಗಿ ಚಿತ್ರದುರ್ಗ ಇತಿಹಾಸ ಸಂಶೋಧಕರು ಮತ್ತು ಶಾಸನ ತಜ್ಞ ಡಾ.ಬಿ. ರಾಜಶೇಖರಪ್ಪ, ಮೈಸೂರು ಸಾಹಿತಿಗಳೂ, ಸಂಶೋಧಕ ಡಾ. ರಾಜಶೇಖರ ಜಮದಂಡಿ ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಚಿತ್ರದುರ್ಗ ಪರಮ ರತ್ನ ಸಂಗೀತ ಸಂಸ್ಥೆಯ ಸುಜೀತ್ ಕುಲಕರ್ಣಿ ಮತ್ತು ತಂಡದವರಿಂದ ವಚನಗೀತೆ, ಸಿರಿಗೆರೆ ಎಂ.ಬಿ. ಆರ್. ಕಾಲೇಜಿನ ತಂಡದಿಂದ ವಚನ ನೃತ್ಯ, ಭೀಮಸಮುದ್ರ ಶ್ರೀ ಭೀಮೇಶ್ವರ ಪ್ರೌಢಶಾಲೆಯ ಜಡೆ ಕೋಲಾಟ ತಂಡದವರಿಂದ ಜಾನಪದ ಸಿರಿ, ಸಿರಿಗೆರೆ ತರಳಬಾಳು ಕಲಾ ಸಂಘದ ಕಲಾವಿದರಿಂದ ಶರಣ ಸಂಕುಲ ಶಿವಶರಣ ಹರಳಯ್ಯ ನೃತ್ಯ ರೂಪಕ ಹಾಗೂ ಭರಮಸಾಗರ ಜನರೇಷನ್ ಅರೇನಾ ಕಲಾ ಸಂಸ್ಥೆಯ ಕಲಾವಿದರಿಂದ ಭರತ ನಾಟ್ಯ ಕಾರ್ಯಕ್ರಮ ಏರ್ಪಡಿಸಲಾಗಿದೆ.

## ದಾವಣಗೆರೆ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷರಾಗಿ ಲಿಂಗರಾಜ್ ವಾಲಿ



ದಾವಣಗೆರೆ, ಫೆ. 6- ಈಚೆಗೆ ನಡೆದ ದಾವಣಗೆರೆ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಸರ್ವ ಸದಸ್ಯರ ವಿಶೇಷ ಮಹಾಸಭೆ ಅಧ್ಯಕ್ಷರಾಗಿ ಲಿಂಗರಾಜ್ ವಾಲಿ, ಕಾರ್ಯದರ್ಶಿ ಎಸ್. ರವಿಕುಮಾರ, ಖಜಾಂಚಿಯಾಗಿ ಜೆ.ಪಿ. ಯೋಗಾನಂದ ಸ್ವಾಮಿ ಹಾಗೂ ಉಪಾಧ್ಯಕ್ಷರುಗಳಾಗಿ ಎಂ. ಪ್ರಕಾಶ್ (ಹರಿಹರ), ಪಿ.ಬಿ. ಶೈಲೇಶ್ (ಹೊನ್ನಾಳಿ), ಕೆ.ಎಂ. ಮಂಜುನಾಥ (ಜಗಳೂರು), ಎಂ.ಎನ್. ಪ್ರಕಾಶ್ (ಚನ್ನಗಿರಿ), ಜಂಟಿ ಕಾರ್ಯದರ್ಶಿಯಾಗಿ ಬಿ.ಓ. ಮಲ್ಲಿಕಾರ್ಜುನ್, ಬಸವ ಆರಾಧ್ಯ (ಚನ್ನಗಿರಿ) ಹಾಗೂ ಸಂಘಟನಾ ಕಾರ್ಯದರ್ಶಿ ಜೆ.ಎಸ್. ಲೋಕೇಶ್ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪ್ರಕಾಶ್ ಎಂ,ಹರಿಹರ, ಶೈಲೇಶ್ ಪಿಬಿ ಹೊನ್ನಾಳಿ, ಮಂಜುನಾಥ ಕೆಎಂ ಜಗಳೂರು, ಪ್ರಕಾಶ್ ಎಂ ಎನ್ ಚನ್ನಗಿರಿ ಜಂಟಿ ಕಾರ್ಯದರ್ಶಿಯಾಗಿ ಮಲ್ಲಿಕಾರ್ಜುನ್ ಬಿ ಓ, ಬಸವ ಆರಾಧ್ಯ ಚನ್ನಗಿರಿ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಲೋಕೇಶ್ ಜೆ. ಎಸ್. ಅವರೆಲ್ಲರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ

## ಬಾಂಗ್ಲಾದೇಶ ಅವಾಮಿ ಲೀಗ್ ನಾಯಕರ ಮನೆಗಳು ಧ್ವಂಸ

### ಹಸೀನಾ ಕುಟುಂಬದ ಮನೆಗೆ ಬೆಂಕಿ

ಢಾಕಾ, ಫೆ. 6 - ಬಾಂಗ್ಲಾದೇಶದಲ್ಲಿ ಪ್ರತಿಭಟನಾಕಾರರು ಶೇಕ್ ಹಸೀನಾ ಅವರ ಅವಾಮಿ ಲೀಗ್ ನಾಯಕರ ಮನೆಗಳನ್ನು ಧ್ವಂಸಗೊಳಿಸಿದ್ದಾರೆ ಹಾಗೂ ದೇಶದ ಸ್ಥಾಪಕ ಶೇಕ್ ಮುಜೀಬುರ್ ರಹಮಾನ್ ಅವರ ಸ್ಮಾರಕಗಳನ್ನು ವಿರೂಪಗೊಳಿಸಿದ್ದಾರೆ. ಇದಕ್ಕೂ ಮುಂಚೆ ಹಸೀನಾ ಅವರ ಮನೆಗೆ ಬೆಂಕಿ ಹಚ್ಚಲಾಗಿತ್ತು. ಹಸೀನಾ ಅವರು ಆನ್‌ಲೈನ್ ಮೂಲಕ ಮಾತನಾಡಿದ ನಂತರ ಪ್ರತಿಭಟನಾಕಾರರು ಈ ಕೃತ್ಯಗಳನ್ನು ಎಸಗಿದ್ದಾರೆ.

ರಾಜಧಾನಿಯಲ್ಲಿರುವ ಹಸೀನಾ ಅವರ ತಂದೆ ಮುಜೀಬುರ್ ರೆಹಮಾನ್ ಅವರ ಮನೆಯ ಎದುರು ಸಾವಿರಾರು ಜನರು ಸೇರಿದ್ದರು. ನಂತರ ಮನೆಯನ್ನು ಬುಲ್ಡೋಜರ್ ಮೂಲಕ ಧ್ವಂಸಗೊಳಿಸಲು ಆರಂಭಿಸಲಾಯಿತು. ಗುರುವಾರ ಸಹ ಧ್ವಂಸ ಮುಂದುವರಿಸಲಾಗಿತ್ತು.

ರಾಜಧಾನಿಯಲ್ಲಿರುವ ಹಸೀನಾ ಅವರ ಸುಧಾ ಸದನ್ ಮನೆಗೆ ಬುಧವಾರ ತಡರಾತ್ರಿ ಬೆಂಕಿ ಹಚ್ಚಲಾಗಿತ್ತು. ಕಳೆದ ವರ್ಷ ಆಗಸ್ಟ್ 5ರಂದು ಹಸೀನಾ ಸರ್ಕಾರ ಪತನಗೊಂಡ ನಂತರ ಸುಧಾ ಸದನ ಖಾಲಿ ಉಳಿದಿದೆ.

ಹಸೀನಾ ಸಂಬಂಧಿಕರಾದ ಶೇಕ್ ಹೆಲಾಲ್ ಉದ್ದೀನ್ ಹಾಗೂ ಶೇಕ್ ಸಲಾವುದ್ದೀನ್ ಜವೆಲ್ ಅವರ ಮನೆಗಳನ್ನು ಸಹ ಧ್ವಂಸಗೊಳಿಸಲಾಗಿದೆ.

ಅವಾಮಿ ಲೀಗ್ ಜಂಟಿ ಕಾರ್ಯದರ್ಶಿ ಮೆಹಬೂಬುಲ್ ಹನೀಫ್ ಅವರ ಮನೆಯನ್ನೂ ಲೂಟಿ ಮಾಡಲಾಗಿದೆ.

ಬುಧವಾರ ರಾತ್ರಿ ಬಾಂಗ್ಲಾದೇಶ್ ಅವಾಮಿ ಲೀಗ್‌ನ ಸಾಮಾಜಿಕ ಮಾಧ್ಯಮಗಳ ಮೂಲಕ ಹಸೀನಾ ಅವರ ಭಾಷಣ ಪ್ರಸಾರ ಮಾಡಲಾಗಿತ್ತು.

## ಭಾರತಿ ಏರ್‌ಟೆಲ್ ಲಾಭ 5 ಪಟ್ಟು ಹೆಚ್ಚಳ

ನವದೆಹಲಿ, ಫೆ. 6 - ಭಾರತಿ ಏರ್‌ಟೆಲ್ ಲಾಭದ ಪ್ರಮಾಣ ತೃತೀಯ ಚತುರ್ಥದಲ್ಲಿ 5 ಪಟ್ಟು ಹೆಚ್ಚಾಗಿದೆ. ತೃತೀಯ ಚತುರ್ಥದಲ್ಲಿ ಕಂಪನಿ 16,134.6 ಕೋಟಿ ರೂ.ಗಳ ಲಾಭ ಗಳಿಸಿದೆ. ಇಂಡಸ್ ಟವರ್ ಉದ್ಯಮ ಹಾಗೂ ಸೇವಾ ದರಗಳನ್ನು ಹೆಚ್ಚಿಸಿದ ಕಾರಣ ಕಂಪನಿ ಗಳಿಸಿದ ಲಾಭ ಹೆಚ್ಚಾಗಿದೆ.

ಕಳೆದ ವರ್ಷ ಇದೇ ಚತುರ್ಥದಲ್ಲಿ ಕಂಪನಿ 2,876.4 ಕೋಟಿ ರೂಪಾಯಿಗಳ ಲಾಭ ಗಳಿಸಿತ್ತು.

# ರಾಜಕಾರಣಿಗಳ ಕಿವಿ ಹಿಂಡುವ ಕೆಲಸವಾಗಬೇಕಿದೆ : ವಿಜಯೇಂದ್ರ

ಸಿರಿಗೆರೆ, ಫೆ.6- ಉತ್ತಮ ಸಮಾಜ ನಿರ್ಮಾಣಕ್ಕಾಗಿ ಜನರು ಹಾಗೂ ಮಠಾಧೀಶರು ಜನಪ್ರತಿನಿಧಿಗಳ ಕಿವಿ ಹಿಂಡುವ ಕೆಲಸ ವಾಗಬೇಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ, ಶಿಕಾರಿಪುರದ ಶಾಸಕ ಬಿ.ವೈ. ವಿಜಯೇಂದ್ರ ಅಭಿಪ್ರಾಯಿಸಿದರು.



ಭರಮಸಾಗಾರದಲ್ಲಿ ಗುರಾವಾರ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾತನಾಡಿದರು.

ಅವರು, ಗುರುವಾರ ಚಿತ್ರದುರ್ಗ ತಾಲ್ಲೂಕು ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಮೂರನೇ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಸ್ವಾತಂತ್ರ್ಯಾ ನಂತರದಲ್ಲಿ ಜನರು ಯೋಗ್ಯರನ್ನು ಗುರುತಿಸಿ ಚುನಾವಣೆಯಲ್ಲಿ ಗೆಲ್ಲಿಸಿ ಕಳುಹಿಸುತ್ತಿದ್ದರು. ಆದರೆ ಇಂದು ರಾಜಕಾರಣಿಗಳು ಜನರಿಗೆ ಆಮಿಷವೊಡ್ಡಿ ಮೋಸ ಮಾಡುತ್ತಿದ್ದಾರೆ. ಇದರಿಂದ ಅಪ್ರಾಮಾಣಿಕರು ಹೆಚ್ಚಾಗುತ್ತಿದ್ದಾರೆ. ರಾಜಕಾರಣಿಗಳಿಗೆ ಹೇಗೆ ಕಿವಿ ಹಿಂಡಬೇಕು ಎಂಬುದನ್ನು ಮತದಾರರು ಮರೆಯುತ್ತಿದ್ದಾರೆ ಎಂದು ವಿಷಾದಿಸಿದರು.

ರಾಜಕೀಯ ಕ್ಷೇತ್ರದಲ್ಲಿ ಪ್ರಾಮಾಣಿಕರು ಬರಬೇಕಾದರೆ, ಬಸವಣ್ಣನವರು ಕಂಡ ಸಮ ಸಮಾಜದ ಕನಸು ನನಸಾಗಬೇಕಾದರೆ ಜನರು ಜಾಗೃತರಾಗಬೇಕು ಎಂದರು.

ಕಬಡ್ಡಿ ಕ್ರೀಡೆಯಲ್ಲಿ ಭಾರತೀಯರನ್ನು ಸೋಲಿಸಲು ಬೇರೆ ದೇಶದವರಿಗೆ ಸಾಧ್ಯವಾಗಿಲ್ಲ. ಏಕೆಂದರೆ ಅದು ಕಾಲೆಳೆಯುವ ಆಟ. ಹಾಗೆಯೇ ಸಮಾಜದಲ್ಲೂ, ರಾಜಕೀಯದಲ್ಲೂ ಕಾಲೆಳೆಯುವವರು ಹೆಚ್ಚಾಗಿದ್ದಾರೆ. ಈ ನಡುವೆಯೂ ಮುಂದೆ ಗುರಿ ಹಾಗೂ ಹಿಂದೆ ಗುರು ಇದ್ದರೆ ಯಶಸ್ವಿಯಾಗಿ ಮುನ್ನುಗ್ಗಲು ಸಾಧ್ಯವಿದೆ ಎಂದರು.

ಸಮಾಜ ಹಾಗೂ ರಾಜಕಾರಣ ಸಮುದ್ರ ಮಥನವಿದ್ದಂತೆ. ಸಮುದ್ರ ಮಥನದಲ್ಲಿ ರಾಕ್ಷಸರೂ ಇದ್ದರು, ದೇವತೆಗಳೂ ಇದ್ದರು. ಮಥನದ ಸಂದರ್ಭದಲ್ಲಿ ಒಂದೇ ಬಾರಿ ಅಮೃತ ಸಿಗಲಿಲ್ಲ. ಹಾಲಾಹಲವನ್ನೂ ಕುಡಿಯಬೇಕಾಯಿತು. ಇದನ್ನು ರಾಜಕಾರಣಿಗಳೂ ನೆನಪಿಟ್ಟುಕೊಳ್ಳಬೇಕು. ಸಮಾಜದ ಹಿತದೃಷ್ಟಿಯಿಂದ ಕಷ್ಟಕಾರ್ಪಣ್ಯಗಳನ್ನೂ ನುಂಗಿಕೊಳ್ಳಬೇಕು ಎಂದು ಹೇಳಿದರು.

ಚಲನಚಿತ್ರ ನಟ ಮುಖ್ಯಮಂತ್ರಿ ಚಂದ್ರು ಮಾತನಾಡಿ, ರಾಜಕಾರಣ ಹಿಂದೆ ಸೇವೆಯಾಗಿತ್ತು. ಈಗ ಅಧಿಕಾರವಾಗಿದೆ. ಸಮಾಜದಲ್ಲಿ ಒಳ್ಳೆಯ ಬದುಕು ಬದುಕಬೇಕಾದರೆ ಮಾನ, ಮರ್ಯಾದೆ ಮುಖ್ಯವಾಗಿತ್ತು. ಈಗ ಅಧಿಕಾರ, ಆಸ್ತಿ ಹಣ ಮುಖ್ಯವಾಗಿದೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಎಂಬ ಸರ್ವಜ್ಞನ ವಚನವನ್ನು ಈಗ ಕೋಟಿ ವಿದ್ಯೆಗಳಲ್ಲಿ ಲೂಟಿ ವಿದ್ಯೆಯೇ ಮೇಲು ಎನ್ನುವಂತಾಗಿದೆ ಎಂದರು.

ಸ್ವಾತಂತ್ರ್ಯ ಪೂರ್ವ ರಾಜಕಾರಣವೇ ಬೇರೆ, ನಂತರದ ರಾಜಕಾರಣವೇ ಬೇರೆ. ಹಿಂದುತ್ವವನ್ನು ಅರ್ಥಮಾಡಿಕೊಳ್ಳದ ಸರ್ಕಾರ, ಹಿಂದುತ್ವದ ಉಳಿಸಿ ಎನ್ನುತ್ತಿದೆ. ಸಂವಿಧಾನವನ್ನೇ ಓದಿಕೊಳ್ಳದ ಪಕ್ಷ ಸಂವಿಧಾನ ಉಳಿಸಿ ಎನ್ನುತ್ತಿದೆ. ಮತ್ತೊಂದು ಪಕ್ಷ ಕುಟುಂಬಕ್ಕಾಗಿ ನಮ್ಮ ಪಕ್ಷ ಉಳಿಸಿ ಎನ್ನುತ್ತಿದೆ ಎಂದರು.

ಹಿಂದೆ ಹಣ ಕೊಟ್ಟು, ಊಟ ಕೊಟ್ಟು ಗೆಲ್ಲಿಸುತ್ತಿದ್ದರು. ಆದರೆ ಇಂದು ಹಂಡೆ ಹಂಡೆಯಲ್ಲಿ ಹಣ ಮಾಡಿ, ಕಿಂಡಿ ಕಿಂಡಿಯಲ್ಲಿ ಹಣ ಹಂಚುತ್ತಿದ್ದಾರೆ. ಸಮಾಜ ಹಾಗೂ ರಾಜಕಾರಣ ಎರಡೂ ಕಲುಷಿತಗೊಂಡಂತಾಗಿದೆ. ಈ ಹಿನ್ನೆಲೆಯಲ್ಲಿ ಜನರು ಎಚ್ಚೆತ್ತುಕೊಳ್ಳಬೇಕಿದೆ. ಕಡ್ಡಾಯ ಮತದಾನ ಮಾಡಿ, ಯೋಗ್ಯರನ್ನು ಆಯ್ಕೆ ಮಾಡಬೇಕಿದೆ ಎಂದು ಹೇಳಿದರು.

ಬಿಳಿಚೋಡು ಬಸವೇಶ್ವರ ಭಜನಾ ತಂಡದವರು ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಕುಮಾರಿ ಭೂಮಿಕಾ, ದೀಪಿಕಾ ಕುಂದಗೋಡು ವಚನ ಗೀತೆ ಹಾಡಿದರು. ಬಿ.ಲಿಂಗಯ್ಯ ವಸತಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ವಚನ ನೃತ್ಯ ನಡೆಸಿಕೊಟ್ಟರೆ, ಭರಮಸಾಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಲಂಬಾಣಿ ನತ್, ತರಳಬಾಳು ಕಲಾ ಸಂಘದವರು ಭರತನಾಟ್ಯ ಹಾಗೂ ಡಿವಿಎಸ್ ಪ್ರೌಢಶಾಲಾ ವಿದ್ಯಾರ್ಥಿಗಳು ಕುರುಡು ಕಾಂಚಾಣ ಜಾನಪದ ನೃತ್ಯ ಪ್ರದರ್ಶಿಸಿದರು.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಚಿತ್ರದುರ್ಗ ಲೋಕಸಭಾ ಸದಸ್ಯ ಗೋವಿಂದ ಕಾರಜೋಳ, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ, ಶಾಸಕರುಗಳಾದ ಬಿ.ಜಿ. ಗೋವಿಂದಪ್ಪ, ವೀರೇಂದ್ರ ಪಪ್ಪಿ, ಹೆಚ್.ಕೆ. ಸುರೇಶ್, ಕೆ. ಎಸ್. ಬಸವಂತಪ್ಪ, ಪ್ರಕಾಶ್ ಕೋಳಿವಾಡ, ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ, ಮಿಮಿಕ್ರಿ ಗೋಪಿ ಇತರರು ಈ ಸಂದರ್ಭದಲ್ಲಿದ್ದರು.

## ನಮ್ಮ ಭಾಗದ ರೈತರನ್ನೂ ಉಳಿಸಿ : ಶಾಸಕ ಬಿ.ಪಿ.ಹರೀಶ್

ದಾವಣಗೆರೆ, ಫೆ.6- ತುಂಗಭದ್ರಾ ನದಿಯಿಂದ ಜಗಳೂರು, ಭರಮ ಸಾಗರಕ್ಕೆ ನೀರು ತೆಗೆದುಕೊಂಡು ಹೋಗಲಾಗುತ್ತಿದೆ. ಆದರೆ ಹರಿಹರ ಭಾಗಕ್ಕೆ ನೀರು ಸಿಗದೇ ಇರುವುದು ನೋವಿನ ವಿಚಾರ. ದೀಪದ ಕೆಳಗೆ ನೆರಳು ಎನ್ನುವಂತಹ ಪರಿಸ್ಥಿತಿ ಹರಿಹರ ಭಾಗದ ರೈತರದ್ದಾಗಿದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ಅವರು, ಗುರುವಾರ ಚಿತ್ರದುರ್ಗ ತಾಲ್ಲೂಕು ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಮೂರನೇ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಅಕ್ರಮ ಪಂಪ್‌ಸೆಟ್ ತೆಗೆಸಲು ಹೋರಾಟ ನಡೆಯುತ್ತಿದೆ. ಕಳೆದ 20-30 ವರ್ಷಗಳಿಂದ ಪಂಪ್‌ಸೆಟ್ ಹಾಕಲು ಬಿಟ್ಟದ್ದು ಸರ್ಕಾರದ ತಪ್ಪು. ಈಗ ಪಂಪ್‌ಸೆಟ್ ತೆರವಾದರೆ ನೂರಾರು ಎಕರೆ ಅಡಿಕೆ ತೋಟಕ್ಕೆ ನಷ್ಟವಾಗುತ್ತದೆ. ಅಕ್ರಮ ಪಂಪ್‌ಸೆಟ್ ಸಕ್ರಮ ಮಾಡುವ ಶಕ್ತಿ ಸಿರಿಗೆರೆ ಶ್ರೀಗಳಿಗಿದೆ ಎಂದು ಹೇಳಿದರು.

ಶ್ರೀಗಳು ನೀರಾವರಿ ಸಚಿವರು ಹಾಗೂ ಅಧಿಕಾರಿಗಳ ಸಭೆ ನಡೆಸಿ, ತುಂಗಭದ್ರಾ ನದಿಯಿಂದ ಕೆರೆಗಳಿಗೆ ನೀರು ತುಂಬಿಸಿದಂತೆ, ಕೆರೆಗಳಿಂದ ನಾಲೆಗಳಿಗೆ ನೀರು ತರುವ ಮೂಲಕ ನಮ್ಮ ಭಾಗದ ರೈತರನ್ನೂ ಉಳಿಸಬೇಕು ಎಂದು ಮನವಿ ಮಾಡಿದರು.

## ಆವರಗೆರೆ : ಶ್ರೀ ಬಾಲ ಶನೇಶ್ವರಸ್ವಾಮಿ ಮಹಾಕ್ಷೇತ್ರದಲ್ಲಿ 3ನೇ ವಾರ್ಷಿಕೋತ್ಸವ




ದಾವಣಗೆರೆ - ಆವರಗೆರೆಯ (ಶ್ರೀ ಮಹಾಲಕ್ಷ್ಮೀ ಲೇ ಔಟ್ ಪಕ್ಕ) ಎತ್ತಿನ ಸಂತೆ ಹಿಂಭಾಗ ದಲ್ಲಿ ಶ್ರೀ ಗುರು ಬಾಲ ಶನೇಶ್ವರ ಸ್ವಾಮಿ ಮಹಾಕ್ಷೇತ್ರದಲ್ಲಿ 3ನೇ ವರ್ಷದ ವಾರ್ಷಿಕೋತ್ಸವ ಕಾರ್ಯ ಕ್ರಮವನ್ನು ಇಂದು ಮತ್ತು ನಾಳೆ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ ಬೆಳಿಗ್ಗೆ 7 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮತ್ತು ಮೆರವಣಿಗೆ ನಡೆಯಲಿದೆ. ನಂತರ ಬೆಳಿಗ್ಗೆ 9 ಗಂಟೆಗೆ ಕೆಂಡದಾರ್ಚನೆ ಇರುತ್ತದೆ.

ನಾಳೆ ಶನಿವಾರ ಬೆಳಿಗ್ಗೆ 5 ಗಂಟೆಗೆ ಸ್ವಾಮಿಯ ಅಭಿಷೇಕ, ಬೆಳಿಗ್ಗೆ 10.30 ರಿಂದ ವೇದಿಕೆ ಸಮಾರಂಭ ಮತ್ತು ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಇರುತ್ತದೆ. ನಂತರ ಸಂಜೆ 5 ಕ್ಕೆ ಶ್ರೀ ಗುರು ಬಾಲಶನೇಶ್ವರ ಸ್ವಾಮಿ ಯ ಉತ್ಸವ ಮೂರ್ತಿಯ ಮೆರವಣಿಗೆ ಜರಗುವುದು. ಉಜ್ಜಯಿನಿ ಪೀಠದ ಶ್ರೀ ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾ ದರು ಸಾನಿಧ್ಯ ವಹಿಸುವರು. ಕೋಣಂ ದೂರು ಮಠದ ಶ್ರೀ ಶ್ರೀಪತಿ ಪಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸುವರು. ವಿಶೇಷ ಆಹ್ವಾನಿತರಾಗಿ ಕೆಎಸ್ಸಾ ರ್ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಎನ್. ಹೆಬ್ಬಾಳ ಆಗಮಿಸುವರು.

## ಮಹಿಳೆಯರ ಕ್ರೀಡೆಗಳಿಂದ ಪುರುಷರು ಹೊರಕ್ಕೆ

### ಅಮೆರಿಕ ಅಧ್ಯಕ್ಷ ಟ್ರಂಪ್ ಆದೇಶ



ವಾಷಿಂಗ್ಟನ್, ಫೆ. 6 - ಮಹಿಳೆಯರ ಹಾಗೂ ಬಾಲಕಿಯರ ಕ್ರೀಡೆಗಳಿಂದ ತೃತೀಯ ಲಿಂಗಿಗಳನ್ನು ಹೊರಕ್ಕಿಡಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಾರ್ಯಕಾರಿ ಆದೇಶ ಹೊರಡಿಸಿದ್ದಾರೆ.

ಮಹಿಳೆಯರ ಕ್ರೀಡೆಗಳಿಂದ ಪುರುಷರನ್ನು ಹೊರಗಿಡಬೇಕು ಎಂದು ಆದೇಶ ಹೊರಡಿಸಲಾಗಿದೆ. ಒಕ್ಕೂಟ ಸರ್ಕಾರದಿಂದ ಅನುದಾನ ಪಡೆಯುವ ಕ್ರೀಡೆಗಳಿಗೆ ಈ ನಿಯಮ ಅನ್ವಯವಾಗಲಿದೆ. ಮಗುವೊಂದು ಹುಟ್ಟಿದ ಸಮಯದಲ್ಲಿ ನೀಡಲಾಗುವ ಲಿಂಗವನ್ನೇ ಕ್ರೀಡೆಗಳಲ್ಲಿ ಪರಿಗಣಿಸಬೇಕು ಎಂದು ತಿಳಿಸಲಾಗಿದೆ.

ಶಾಸಕರು ಹಾಗೂ ಮಹಿಳಾ ಕ್ರೀಡಾಪಟುಗಳ ಉಪಸ್ಥಿತಿಯಲ್ಲಿ ಈ ಆದೇಶಕ್ಕೆ ಟ್ರಂಪ್ ಸಹಿ ಹಾಕಿದ್ದಾರೆ. ಈ ಆದೇಶದೊಂದಿಗೆ ಮಹಿಳೆಯರ ಕ್ರೀಡೆಗಳ ವಿರುದ್ಧ ನಡೆಸಲಾಗುತ್ತಿದ್ದ ಸಮರ ಅಂತ್ಯವಾಗಿದೆ ಎಂದು ಟ್ರಂಪ್ ತಿಳಿಸಿದ್ದಾರೆ. ತೃತೀಯ ಲಿಂಗಿಗಳ ಕುರಿತಾದ ಅವಿವೇಕವನ್ನು ತೊಡೆದು ಹಾಕಲಾಗುವುದು ಎಂದು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಟ್ರಂಪ್ ತಿಳಿಸಿದ್ದರು. ಅದರಂತೆ ಈಗ ಆದೇಶ ಹೊರಡಿಸಲಾಗಿದೆ.

ಟ್ರಂಪ್ ಹೊರಡಿಸಿರುವ ಆದೇಶ 2028ರ ಒಲಂಪಿಕ್ ಕ್ರೀಡಾಕೂಟದ ಮೇಲು ಪರಿಣಾಮ ಬೀರುವ ಸಾಧ್ಯತೆ. ಇದೆ ಮಹಿಳೆಯರ ಕ್ರೀಡೆಗಳನ್ನು ಮಹಿಳೆಯರಿ ಗಾಗಿ ಕಾಯ್ದಿರಿಸುವ ಕುರಿತು ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿಗೆ ಈಗಾಗಲೇ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. 2028ರ ಬೇಸಿಗೆ ಒಲಂಪಿಕ್ ಪಂದ್ಯಾವಳಿ ಲಾಸ್ ಎಂಜಲೀಸ್‌ನಲ್ಲಿ ನಡೆಯಲಿದೆ.

ಒಲಂಪಿಕ್ ಕ್ರೀಡಾಕೂಟದಲ್ಲಿ ತೃತೀಯ ಲಿಂಗಿಗಳು ಮಹಿಳೆಯರ ವಿಭಾಗದಲ್ಲಿ ಪಾಲ್ಗೊಳ್ಳುವ ಕುರಿತ ವಿಷಯವನ್ನು ಒಲಂಪಿಕ್ ಸಮಿತಿಯು ಪ್ರತಿ ಪಂದ್ಯದ ಅಂತರರಾಷ್ಟ್ರೀಯ ಒಕ್ಕೂಟಗಳಿಗೆ ಬಿಟ್ಟಿದೆ.

ಪುರುಷರು ತಾವು ಮಹಿಳೆಯರು ಎಂದು ಹೇಳಿಕೊಂಡು ಮಹಿಳಾ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಸಲ್ಲಿಸುವ ವೀಸಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಟ್ರಂಪ್ ಹೇಳಿದ್ದರು.

## ಹುಚ್ಚಂಗಿಪುರದಲ್ಲಿ ಇಂದು ನೂತನ ಶಾಲಾ ಕಟ್ಟಡ ಉದ್ಘಾಟನೆ

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ಸಂಸದರುಗಳ ಹಾಗೂ ಶಾಸಕರುಗಳ ಇವರ ಪ್ರದೇಶಾಭಿವೃದ್ಧಿ ನಿಧಿಯಿಂದ ನಿರ್ಮಿಸಲಾದ ನೂತನ ಶಾಲಾ ಕಟ್ಟಡದ ಲೋಕಾರ್ಪಣಾ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 12.30ಕ್ಕೆ ಜಗಳೂರು ತಾಲ್ಲೂಕು ಹುಚ್ಚಂಗಿಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಆಯೋಜಿಸಲಾಗಿದೆ.

ಸಚಿವ ಎಸ್.ಎಸ್ ಮಲ್ಲಿಕಾರ್ಜುನ್, ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಬಿ. ದೇವೇಂದ್ರಪ್ಪ ಅಧ್ಯಕ್ಷತೆ ವಹಿಸುವರು. ಕೇಂದ್ರ ಹಣಕಾಸು ಸಚಿವರಾದ ನಿರ್ಮಲ ಸೀತಾರಾಮನ್, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಸಂಸದರಾದ ಲೆಹರ್ ಸಿಂಗ್ ಸಿರೋಯಾ, ಕೆ. ನಾರಾಯಣ, ವೀರಣ್ಣ ಕಡಾಡಿ, ವಿಧಾನ ಪರಿಷತ್ ಶಾಸಕ ಎನ್. ರವಿಕುಮಾರ್, ಡಾ. ಎಂ.ಜಿ. ಮೂಳೆ, ಡಿ.ಟಿ. ಶ್ರೀನಿವಾಸ್, ಚಿದಾನಂದ ಎಂ. ಗೌಡ, ಕೆ.ಎಸ್. ನವೀನ್, ಮಾಜಿ ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ, ದಿದ್ದಿಗಿ ಗ್ರಾ.ಪಂ. ಅಧ್ಯಕ್ಷ ಗುತ್ಯಮ್ಮ ಸಿದ್ದಪ್ಪ, ಡಿಸಿ ಗಂಗಾಧರಸ್ವಾಮಿ, ಜಿ.ಪಂ. ಸಿಇಓ ಸುರೇಶ್.ಬಿ.ಇಟ್ನಾಳ್, ಎಸ್ಪಿ ಉಮಾ ಪ್ರಶಾಂತ್, ಎಸ್.ಡಿ.ಎಂ.ಸಿ ಅಧ್ಯಕ್ಷ ಪಿ.ಟಿ. ರಮೇಶ್ ಭಾಗವಹಿಸುವರು.

**ದಾನಿಗಳು** : ಸ್ಪೇಸ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ ಲಿಮಿಟೆಡ್‌ನ ಡಾ. ದಿನೇಶ್, ವೋಲ್ವೋ ಗ್ರೂಪ್ ಜಿ.ವಿ. ರಾವ್ ಪಾಲ್ಗೊಳ್ಳುವರು.

## ತಾಂತ್ರಿಕ ದೋಷ : ಮಿರಾಜ್ ಸಮರ ವಿಮಾನ ಪತನ

ಗ್ವಾಲಿಯರ್, ಫೆ. 6 - ಮಿರಾಜ್ - 2000 ಸಮರ ವಿಮಾನ ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯ ಹೊಲದಲ್ಲಿ ಬಿದ್ದಿದೆ. ತಾಂತ್ರಿಕ ದೋಷದಿಂದ ವಿಮಾನ ಪತನಗೊಂಡಿದೆ ಎಂದು ವಾಯುಪಡೆ ತಿಳಿಸಿದೆ. ವಿಮಾನದಲ್ಲಿದ್ದ ಇಬ್ಬರು ಪೈಲೆಟ್‌ಗಳು ಸುರಕ್ಷಿತವಾಗಿ ಹೊರಗೆ ಜಿಗಿದಿದ್ದಾರೆ. ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರನ್ನು ಹೆಲಿಕಾಪ್ಟರ್ ಮೂಲಕ ಗ್ವಾಲಿಯರ್‌ಗೆ ರವಾನಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎರಡು ಸೀಟುಗಳ ತರಬೇತಿ ವಿಮಾನ ಸಾಮಾನ್ಯ ಕಸರತ್ತು ನಡೆಸುತ್ತಿರುವ ವೇಳೆ ಮಧ್ಯಾಹ್ನ 2.40ರ ಸಮಯದಲ್ಲಿ ಪತನಗೊಂಡಿದೆ.

# ನಗರದಲ್ಲಿ ಇಂದಿನಿಂದ 'ದಾವಣಗೆರೆ ರಾಷ್ಟ್ರೀಯ ಅಕ್ಷರ ಹಬ್ಬ-2025'

ದಾವಣಗೆರೆ, ಫೆ. 6- ದಾವಣಗೆರೆ ಲಿಟರರಿ ಫೋರಂ ಹಾಗೂ ಅರಸೀಕೆರೆಯ ಅರಸೀ ಸಾಂಸ್ಕೃತಿಕ ವೇದಿಕೆ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 7, 8 ಮತ್ತು 9 ರಂದು ಮೂರು ದಿನಗಳ ಕಾಲ ನಗರದ ಎಸ್.ಎಸ್.ಲೇಔಟ್ ನಲ್ಲಿರುವ ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ 'ದಾವಣಗೆರೆ ರಾಷ್ಟ್ರೀಯ ಅಕ್ಷರ ಹಬ್ಬ-2025' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಫೋರಂನ ಸಂಚಾಲಕ ಶ್ರೀಹರ್ಷ ಸಾಲಿಮಠ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 7 ರಂದು ಬೆಳಿಗ್ಗೆ 10.30 ಕ್ಕೆ ಹಿರಿಯ ಸಾಹಿತಿಗಳೂ, ರಾಜ್ಯಸಭಾ ಸದಸ್ಯರೂ ಆದ ಡಾ. ಎಲ್. ಹನುಮಂತಯ್ಯ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಗುಲ್ಬರ್ಗಾ ವಿವಿಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಹೆಚ್.ಟಿ. ಪೋತೆ, ಬೆಂಗಳೂರಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಚಂದನ ವಾಹಿನಿ ನಿರ್ದೇಶಕಿ ಹೆಚ್.ಎನ್. ಆರತಿ, ಸಾಹಿತಿಗಳಾದ ಚಾಂದಿನಿ, ಡಾ. ಎ.ಬಿ. ರಾಮಚಂದ್ರಪ್ಪ, ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮತ್ತಿತರರು ಭಾಗವಹಿಸಲಿದ್ದಾರೆ.


ಅಂದು ಮಧ್ಯಾಹ್ನ 1.30 ರಿಂದ ಕಥಾ ಸಮಯ, ಗೋಷ್ಠಿಯಲ್ಲಿ ಕೇಶವರೆಡ್ಡಿ ಹಂದ್ರಾಳ, ರಂಗ ಸಮಯ ಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ಜಯಲಕ್ಷ್ಮೀ ಪಾಟೀಲ್, ಕವಿಗೋಷ್ಠಿಯಲ್ಲಿ ಹಿರಿಯ ಕವಿ ಸತೀಶ್ ಕುಲಕರ್ಣಿ ಮತ್ತಿತರರು ಭಾಗವಹಿಸಲಿದ್ದಾರೆ.


ನಾಡಿದ್ದು ದಿನಾಂಕ 8 ರ ಶನಿವಾರ ಬೆಳಿಗ್ಗೆ 9.30 ರಿಂದ ಕವಿ ಸಮಯ ಗೋಷ್ಠಿಯಲ್ಲಿ ಪದ್ಮ ಚಿನ್ಮಯಿ, ದಾದಾಪೀರ್ ನವಿಲೇಹಾಳ್, ಮೌಖಿಕ ಸಾಹಿತ್ಯದ ಕಾಣಿಕೆಗಳ ಕುರಿತು ಗೋಷ್ಠಿಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಡಾ. ಬಂಜಗೆರೆ ಜಯಪ್ರಕಾಶ್, ಕವಿ ಸಮಯ ಗೋಷ್ಠಿಯಲ್ಲಿ ಡಾ ಪದ್ಮಿನಿ ನಾಗರಾಜ್, ವಿದ್ಯಾ ರಶ್ಮಿ, ಶ್ರೀದೇವಿ ಕಳಸದ, ಶುಭಾ ಮರವಂತೆ, ಕವಿಗೋಷ್ಠಿಯಲ್ಲಿ ಹೇಮಲತಾ ವಸ್ತ್ರದ್, ಸುಜಾತಾ ಛಲವಾದಿ ಮತ್ತಿತರರು ಭಾಗವಹಿಸಲಿದ್ದಾರೆ.

ದಿನಾಂಕ 9 ರ ಭಾನುವಾರ ಬೆಳಿಗ್ಗೆ 10 ಕ್ಕೆ ಜಿ.ಎನ್. ಮೋಹನ್ ಅಧ್ಯಕ್ಷತೆಯಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11.15 ರಿಂದ ವರ್ತಮಾನ ಸಾಹಿತ್ಯದ ಸೃಜನಶೀಲ ಬಿಕ್ಕಟ್ಟುಗಳು ವಿಚಾರಗೋಷ್ಠಿ ನಡೆಯಲಿದೆ.

ಮಧ್ಯಾಹ್ನ 2.30 ರಿಂದ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಹಿರಿಯ ಪತ್ರಕರ್ತ ರವೀಂದ್ರ ಭಟ್ ಐನಕೈ, ರೈತ ಮುಖಂಡ ತೇಜಸ್ವಿ ಪಟೇಲ್, ದಾಕ್ಷಾಯಿಣಿ ಹುಡೇದ, ದಾವಣಗೆರೆ ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಶಿವಕುಮಾರ ಕಣಸೋಗಿ ಮತ್ತಿತರರು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಫೋರಂನ ಉದಯ್ ಇಟಗಿ, ಕೆ.ಸಿ. ಶೃತಿ, ಚಂದ್ರಕಾಂತ್ ಉಪಸ್ಥಿತರಿದ್ದರು.





# ಮಲೇಬೆನ್ನೂರಿನಲ್ಲಿ ವೈಭವದ ಉರುಸ್, ಖವ್ವಾಲಿ ನೋಡಲು ಜನಸಾಗರ

ಮಲೇಬೆನ್ನೂರು, ಫೆ.6- ಸೌಹಾರ್ದತೆ ಸಾರುವ ಪಟ್ಟಣದ ಪ್ರಸಿದ್ಧ ಸೂಫಿ ಸಂತ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಗಂಧ ಮತ್ತು ಉರುಸು ಅಂಗವಾಗಿ ಗುರುವಾರ ರಾತ್ರಿ ದರ್ಗಾ ಆವರಣದಲ್ಲಿ ಹಮ್ಮಿಕೊಂಡಿದ್ದ ಖವ್ವಾಲಿ ಕಾರ್ಯಕ್ರಮವನ್ನು ನೋಡಲು ಜನ ಸಾಗರವೇ ಹರಿದು ಬಂದಿತ್ತು.

ಹರಿಹರ, ದಾವಣಗೆರೆ, ರಾಣೇಬೆನ್ನೂರು, ಹಿರೇಕೆರೂರು, ರಟ್ಟಿಹಳ್ಳಿ, ಹಾವೇರಿ, ಹೊನ್ನಾಳಿ, ಚನ್ನಗಿರಿ, ಬಸವಾಪಟ್ಟಣ, ಸಾಸ್ವೆಹಳ್ಳಿ, ಶಿವಮೊಗ್ಗ, ಭದ್ರಾವತಿ ಸೇರಿದಂತೆ ದೂರದ ಊರುಗಳಿಂದ ಜನ ದಾಖಲೆ ಸಂಖ್ಯೆಯಲ್ಲಿ ಮಲೇಬೆನ್ನೂರಿಗೆ ಆಗಮಿಸಿದ್ದರಿಂದ ದರ್ಗಾ ಆವರಣ ಜನರಿಂದ ತುಂಬಿ ತುಳುಕುತ್ತಿತ್ತು. ಗಾಯಕರಾದ ಮುಂಬಯಿಯ ಆಜೀಮ್ ಮತ್ತು ಜುನೇದ್ ಸುಲ್ತಾನಿ ಇವರ ಖವ್ವಾಲಿ ಜನಮನ ಸೆಳೆಯಿತು. ಇವರ ಹಾಡುಗಳಿಗೆ ಹುಚ್ಚೆದ್ದು ಕುಣಿದ ಯುವಕರು ನೋಟಿನ ಸುರಿಮಳೆ ಸುರಿಸಿ ಖುಷಿಪಟ್ಟರು.

ಖವ್ವಾಲಿ ನೋಡಲು ಜನ ತಡರಾತ್ರಿ 1 ಗಂಟೆವರೆಗೂ ಕಾರು, ಆಟೋಗಳಲ್ಲಿ ಆಗಮಿಸುತ್ತಲೇ ಇದ್ದರು. ಇದರಿಂದಾಗಿ ಪಟ್ಟಣದ ಹೆದ್ದಾರಿ ಉದ್ದಕ್ಕೂ ಮತ್ತು ಬಸ್ ನಿಲ್ದಾಣ, ನಂದಿಗುಡಿ ರಸ್ತೆ, ನಿಟ್ಟೂರು ರಸ್ತೆ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಸಾವಿರಾರು ವಾಹನಗಳು ನಿಂತಿದ್ದವು.

ಮಾಜಿ ಶಾಸಕ ಎಸ್ ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಮುಖಂಡ ಶ್ರೀನಿವಾಸ್ ದಾಸಕರಿಯಪ್ಪ ಸೇರಿದಂತೆ ಇನ್ನೂ ಅನೇಕರು ದರ್ಗಾಕ್ಕೆ ಆಗಮಿಸಿ, ಚಾದರ ಹೊದಿಸಿ ಭಕ್ತಿ ಸಮರ್ಪಿಸಿದರು. ಗುರುವಾರ ಇಡೀ ದಿನ ಭಕ್ತರು ದರ್ಗಾಕ್ಕೆ ಆಗಮಿಸಿ, ಪ್ರಸಾದ ನೈವೇದಿಸಿ ಭಕ್ತಿ ಸಲ್ಲಿಸಿದರು.

ನ್ಯಾಯಾಧೀಶರಾದ ತಾಜ್ ಉದ್ದಿನ್, ದಾವಣಗೆರೆ ಮೇಯರ್ ಚಮನ್ ಸಾಬ್, ಪುರಸಭೆ ಅಧ್ಯಕ್ಷ ಹನುಮಂತಪ್ಪ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಜಿ.ಪಂ. ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ.ಎಂ. ವಾಗೀಶ್‌ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಪಿಎಸಿಎಸ್ ಅಧ್ಯಕ್ಷ ಕೆ.ಪಿ.ಗಂಗಾಧರ್, ಮುಖಂಡರಾದ ಎಂ.ಬಿ.ಸಜ್ಜು, ಸೈಯದ್ ಜಾಕೀರ್, ಬಾಷಾ ಸಾಬ್, ಖುದ್ದೂಸ್, ಅಯೂಬ್ ಖಾನ್, ಹಬೀಬ್ ಖಾಜಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಟಿ. ಹೆಚ್.ಓ ಡಾ. ಖಾದರ್, ಬ್ಲಾಕ್ ಕಾಂಗ್ರೆಸ್ ಕಾರ್ಮಿಕರ ವಿಭಾಗದ ಅಧ್ಯಕ್ಷ ಕೆ.ಅಬ್ದುಲ್ ರೆಹಮಾನ್, ರೈಸ್ ಮಿಲ್ ಮಾಲೀಕ ಎನ್.ಕೆ.ಬಸವರಾಜ್, ಪುರಸಭೆ ಸದಸ್ಯರಾದ ಖಲೀಲ್, ಸಾಬೀರ್ ಅಲಿ, ನಯಾಜ್, ದಾದಾಪೀರ್, ಷಾ ಅಬ್ರಾರ್, ಭೋವಿ ಶಿವು, ಗೌಡ್ರ ಮಂಜಣ್ಣ, ಬಿ.ವೀರಯ್ಯ, ಎ.ಆರೀಫ್ ಅಲಿ, ಬುಡ್ಡವ್ವರ ರಫೀಕ್ ಸಾಬ್, ಬಸವರಾಜ್ ದೊಡ್ಮನಿ, ಎಂ.ಬಿ.ರುಸ್ತುಮ್, ಚಮನ್ ಷಾ, ಅನ್ವರ್ ಸಾಬ್, ಜಮೀರ್ ಭಾಷಾ, ಭೋವಿ ಕುಮಾರ್, ಪಿ.ಹೆಚ್. ಶಿವಕುಮಾರ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಯುನೂಸ್, ಕುಂಬಳೂರು ವಾಸು, ತಿಪ್ಪೇಶ್, ನಿವೃತ್ತ ಶಿಕ್ಷಕ ಜಿ.ಆರ್.ನಾಗರಾಜ್, ಪತ್ರಕರ್ತ ಸಿಕಂದರ್ ಸೇರಿದಂತೆ ಇನ್ನೂ ಅನೇಕರು ಈ ದಿನ ಭಾಗವಹಿಸಿದ್ದರು.

ಸುನ್ನಿ ಜಾಮೀಯಾ ಮಸೀದಿಯ ಅಧ್ಯಕ್ಷ ಎಂ.ಬಿ. ಮಹ್ಮದ್ ಹಾಷಮ್, ಉಪಾಧ್ಯಕ್ಷ ಸೈಯದ್ ಸಾಬೀರ್, ಕಾರ್ಯದರ್ಶಿ ದಾದಾವಲಿ, ಖಜಾಂಚಿ ಯೂಸೂಫ್ ಖಾನ್, ಸೈಯದ್ ಖಾಲಿದ್ ಸೇರಿದಂತೆ ಕಮಿಟಿಯ ಇತರೆ ಪದಾಧಿಕಾರಿಗಳು ಹಾಜರಿದ್ದು, ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಡಿವೈಎಸ್ಪಿ ಬಸವರಾಜ್, ಸಿಪಿಐ ಸುರೇಶ್ ಸಗರಿ, ಪಿಎಸ್ಐ ಪ್ರಭು ಕೆಳಗಿನಮನೆ ನೇತೃತ್ವದಲ್ಲಿ ನೂರಾರು ಪೊಲೀಸರು ವಾಹನಗಳ ಹಾಗೂ ಜನರ ನಿಯಂತ್ರಣಕ್ಕೆ ಹರಸಾಹಸಪಟ್ಟರು.


ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ3:ಇ.ಟೆಂಡರ್:16:2024–25
ದಿನಾಂಕ:05.02.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

(ಕೆಪಿಪಿಪಿ ಪೋರ್ಟಲ್ ಮುಖಾಂತರ)

2024–25ನೇ ಪಾಲಿಕೆ ಸಾಮಾನ್ಯ ನಿದಿ– 02 ಸಂಖ್ಯೆಯ ಅಲ್ಪಾವದಿ ಟೆಂಡರ್, 2024–25ನೇ ಪಾಲಿಕೆ ಸಾಮಾನ್ಯ ನಿಧಿ–02 ಸಂಖ್ಯೆಯ ಅಲ್ಪಾವದಿ ಮರು ಟೆಂಡರ್,2024–25ನೇ ಸಾಲಿನ ಶೇಕಡಾ 7.25 ಯೋಜನೆಯ ಎಸ್.ಎಫ್.ಸಿ ಮುಕ್ತ ನಿಧಿ ವ್ಯಕ್ತಿ ಸಂಬಂಧಿತ ಸೌಲಭ್ಯಗಳಿಗೆ 40% – 01 ಸಂಖ್ಯೆಯ ಅಲ್ಪಾವದಿ ಮರು ಟೆಂಡರ್, 2015–16 ಮತ್ತು ಅದಕ್ಕಿಂತ ಹಿಂದಿನ ಸಾಲುಗಳಲ್ಲಿ ಶೇಕಡಾ 24.10 ಯೋಜನೆಯ ಎಸ್.ಸಿ.ಎಸ್.ಪಿ (ಎಸ್.ಎಫ್.ಸಿ) ನಿಧಿಯಡಿ ಉಳಿಕೆ (ವ್ಯಕ್ತಿ ಸಂಬಂಧಿತ)– 01 ಸಂಖ್ಯೆಯ ಅಲ್ಪಾವದಿ ಮರು ಟೆಂಡರ್, 2024–25ನೇ ಸಾಲಿನ ಶೇಕಡಾ 24.10 ಎಸ್.ಸಿ.ಎಸ್.ಪಿ ಸಾಮಾನ್ಯ ನಿಧಿ ಕ್ರಿಯಾ ಯೋಜನೆಯಲ್ಲಿನ ಬದಲಿ ಕಾರ್ಯಕ್ರಮ (ವ್ಯಕ್ತಿ ಸಂಬಂಧಿತ)– 01 ಸಂಖ್ಯೆಯ ಅಲ್ಪಾವದಿ ಮರು ಟೆಂಡರ್ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್ ಕವರ್ ಪದ್ದತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಅಲ್ಪಾವದಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು.

ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಅಲ್ಪಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 13.02.2025 ಸಮಯ: 17.00 ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 14.02.2025 ಸಮಯ 17.00 ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 15.02.2025 .ಸಮಯ : 11.00 ನಂತರ

ವಾಸಾಇ/ದಾವಣಗೆರೆ/715/ಕೆಎಸ್ಎಂಸಿಎ/2024–25

**ಸಹಿ/–ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ದಾವಣಗೆರೆ**

# ಸಬ್ ರಿಜಿಸ್ಟ್ರಾರ್ ಕಚೇರಿ ಸಾಫ್ಟ್‌ವೇರ್ ಗೊಂದಲ;

## ಕೈತಪ್ಪಿದ ಸಾವಿರಾರು ಕೋಟಿ ಆದಾಯ

### ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಟೀಕೆ

ಬೆಂಗಳೂರು,ಫೆ.6- ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ 28 ದಿನಗಳಿಂದ ಯಾವ ಸಾಫ್ಟ್‌ವೇರ್ ಉಪಕರಣಗಳೂ ಕೆಲಸ ಮಾಡುತ್ತಿಲ್ಲ ಎಂದು ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇ-ಖಾತೆ ಇಲ್ಲದೆ ನೋಂದಣಿ ಇಲ್ಲ ಎಂಬ ಹೊಸ ಷರತ್ತು ಜಾರಿ ಮಾಡಲಾಗಿದೆ. ಪೂರ್ವಾಪರ ಯೋಚಿಸದೆ ಹೀಗೆ ಮಾಡಲಾಗಿದೆ ಇದರ ಪರಿಣಾಮ ಕಳೆದ 3 ತಿಂಗಳಿನಿಂದ ಸರ್ಕಾರಕ್ಕೆ ಸುಮಾರು ನಾಲ್ಕೈದು ಸಾವಿರ ಕೋಟಿ ರೂ. ಆದಾಯ ಕೈತಪ್ಪಿದೆ ಎಂದರು.

ಎನ್‌ಕಂಬರೆನ್ಸ್, ಸರ್ಟಿಫೈಡ್ ಕಾಪಿ ಸಿಗುತ್ತಿಲ್ಲ, ಎನ್‌ಕಂಬರೆನ್ಸ್ ಕೇಳಿದರೆ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಸರ್ವರ್ ಡೌನ್ ಎನ್ನುತ್ತಾರೆ. ಒಟಿಪಿ ಬಾರದೇ ನೋಂದಣಿ ನಡೆಯುತ್ತಿಲ್ಲ. ಕಾವೇರಿ-2 ಆಪ್ ಬಂದ ಬಳಿಕ ಒಂದು ದಿನದ ಮುಂಚಿತವಾಗಿ ಹಣ ಪಾವತಿಸಬೇಕಿದೆ.

ಸಾಫ್ಟ್‌ವೇರ್ ಸರ್ವರ್ ಡೌನ್‌ನಿಂದ ನೋಂದಣಿ ನಡೆಯದೆ ಗೊಂದಲ ನಿರ್ಮಾಣವಾಗಿದೆ, ರಾಜ್ಯದಲ್ಲಿ ಕಳೆದ ಎರಡು ತಿಂಗಳುಗಳಿಂದ ಇ-ಖಾತಾ ಹೆಸರಿನಲ್ಲಿ ಉಪ ನೋಂದಣಿ ಕಚೇರಿಯಲ್ಲಿ ಕೆಲಸ ಸ್ಥಗಿತವಾಗಿದ್ದು, ಸಾಮಾನ್ಯ ಜನರು, ಬಡವರು ಕಷ್ಟಕಾಲಕ್ಕೆ ಆಸ್ತಿ ಮಾರಾಟ ಮಾಡಲಾಗದೆ, ಬ್ಯಾಂಕ್‌ನಲ್ಲಿ ಅಡಮಾನ ಮಾಡಿ ಸಾಲ ಪಡೆಯಲು ಹಾಗೂ ಕೈಸಾಲಕ್ಕೆ ತೊಂದರೆ ಆಗುತ್ತಿದೆ.

ಕಂದಾಯ ಸಚಿವ ಕೃಷ್ಣಭೈರೇಗೌಡರು ಇಲಾಖೆ ಕೆಲಸ ಬಿಟ್ಟು ಬೇರೆ ಇಲಾಖೆಗಳ ಕೆಲಸಕ್ಕೆ ಮೂಗು ತೂರಿಸುತ್ತಿದ್ದಾರೆ, ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಕಾವೇರಿ-2 ಸಾಫ್ಟ್‌ವೇರ್ ಹೆಸರಿನಲ್ಲಿ ಒಂದೊಂದು ಕೆಲಸಕ್ಕೆ ಒಂದೊಂದು ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಿದ್ದಾರೆ ಎಂದು ವಿವರಿಸಿದರು.

# ಕೃಷ್ಣಯ್ಯ ಶೆಟ್ಟಿ ಸೇರಿದಂತೆ ಮೂವರಿಗೆ ಜೈಲು

**(1ನೇ ಪುಟದಿಂದ)** ಮೌಲ್ಯದ ಬಾಂಡ್ ಹಾಗೂ ಒಬ್ಬರ ಶ್ಯೂರಿಟಿ ನೀಡಲು ಆದೇಶಿಸಿದರು.

ಆರೋಪಿಗಳು ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಐಟಿಐ, ಎಚ್‌ಎಎಲ್, ಬಿಇಎಂಎಲ್, ಬಿಎಸ್‌ಎನ್‌ಎಲ್ ಇತ್ಯಾದಿ ಸಂಸ್ಥೆಗಳ ನಕಲಿ ವೇತನ ಸ್ಲಿಪ್ ಸಲ್ಲಿಸಿ ಬ್ಯಾಂಕಿಗೆ ಕೋಟ್ಯಂತರ ರೂ. ವಂಚಿಸಿದ್ದರು.

ಬಾಲಾಜಿ ಎಂಟರ್‌ಪ್ರೈಸಸ್ ಲೇಔಟ್ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ 7.17 ಕೋಟಿ ರೂ. ಸಾಲ ಪಡೆದಿದ್ದರು.

ಪ್ರಕರಣದ ಬಗ್ಗೆ ತನಿಖೆ ನಡೆಸಿದ ಸಿಬಿಐ ಈ ನಾಲ್ವರ ವಿರುದ್ಧ ಭಾರತೀಯ ದಂಡ ಸಂಹಿತೆ 120ಬಿ, 409, 419, 420, 467, 471 ಹಾಗೂ ಸಿಆರ್‌ಪಿಸಿ ಸೆಕ್ಷನ್ 13(1)ಡಿ, 13(2) ಅಡಿ ಪ್ರಕರಣ ದಾಖಲಿಸಿ, ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿತ್ತು.

ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ ಇಂದು ತೀರ್ಪು ಪ್ರಕಟಿಸುವ ಸಂದರ್ಭದಲ್ಲೇ ಆರೋಪಿಗಳನ್ನು ತಕ್ಷಣ ಬಂಧಿಸುವಂತೆಯೂ ಆದೇಶ ಮಾಡಿತು.

ಮಾಲೂರು ಕ್ಷೇತ್ರದಿಂದ ಬಿಜೆಪಿಯಿಂದ ವಿಧಾನಸಭೆ ಪ್ರವೇಶಿಸಿದ್ದ ಕೃಷ್ಣಯ್ಯ ಶೆಟ್ಟಿ 1993 ರಲ್ಲಿ ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ಗೃಹ ನಿರ್ಮಾಣ ಸಾಲ ಕೊಡಿಸುವ ಆಮಿಷ ಒಡ್ಡಿ, ಹಲವು ನೌಕರರ ಹೆಸರಿನಲ್ಲಿ ನಕಲಿ ಬ್ಯಾಂಕ್ ಖಾತೆಗಳನ್ನು ಸೃಷ್ಟಿಸಿ ಸಾಲ ಪಡೆದಿದ್ದರು.

ಇದರಲ್ಲಿ 3.53 ಕೋಟಿ ರೂ. ಸಾಲ ತೀರಿಸಿಲ್ಲ ಎಂದು ತನಿಖೆ ನಡೆಸಿದ ಸಿಬಿಐ, ತನ್ನ ಆರೋಪ ಪಟ್ಟಿಯಲ್ಲಿ ತಿಳಿಸಿತ್ತು.

ಯಡಿಯೂರಪ್ಪ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಸರ್ಕಾರ ರಚನೆ ಸಂದರ್ಭದಲ್ಲೇ ಕೃಷ್ಣಯ್ಯ ಶೆಟ್ಟಿ ಮುಜರಾಯಿ ಇಲಾಖೆಯ ಸಂಪುಟ ದರ್ಜೆ ಸಚಿವರಾಗಿ ಕೆಲಸ ಮಾಡಿದ್ದರು.

# 5.16 ಕೋಟಿ ಉಳಿತಾಯ ಬಜೆಟ್

**(1ನೇ ಪುಟದಿಂದ)** ಅನುದಾನ ಕಾಯ್ದಿರಿಸಿದೆ.

**ತಾಲ್ಲೂಕು, ಜಿಲ್ಲಾ ಸಮ್ಮೇಳನಕ್ಕೆ ಅನುದಾನ:** ಅಲ್ಲದೆ ಪಾಲಿಕೆ ವತಿಯಿಂದ ಆಚರಿಸುವ ಕನ್ನಡ ರಾಜ್ಯೋತ್ಸವಕ್ಕೆ 50 ಲಕ್ಷ ರೂ. ಸೇರಿದಂತೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 50 ಸಾವಿರ ರೂ. ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 25 ಲಕ್ಷ ರೂ. ದೇಣಿಗೆ ನೀಡಲು ನಿರ್ಧರಿಸಲಾಗಿದೆ.

**ಒಣ ತ್ಯಾಜ್ಯ ನಿರ್ವಹಣೆಗೆ 11.10 ಕೋಟಿ ರೂ. :** ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಒಣ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇಪಡಿಸಲು 97 ಪಿ.ಟಿ.ಡಿ. ಸಾಮರ್ಥ್ಯದ ಮೆಟೀರಿಯಲ್ ರಿಕವರಿ ಫಿಸಿಲಿಟಿ ಅಭಿವೃದ್ಧಿ ಪಡಿಸಲು ಆಯೋಜಿಸಲಾಗಿದ್ದು, ಇದಕ್ಕಾಗಿ 11.10 ಕೋಟಿ ರೂ. ಹಂಚಿಕೆ ಮಾಡಲಾಗಿದೆ.

**ಸಾರ್ವಜನಿಕ ಶೌಚಾಲಯಕ್ಕೆ 1.26 ಕೋಟಿ.:** ನಗರದ ವಿವಿಧೆಡೆ ಸಾರ್ವಜನಿಕ ಶೌಚಾಲಯ ಹಾಗೂ ಮೂತ್ರಾಲಯಗಳನ್ನು ನಿರ್ಮಿಸಲು 126.32 ಲಕ್ಷ ರೂ. ಕ್ರಿಯಾ ಯೋಜನೆ ಸಿದ್ಧಪಡಿಸಲು ನಿರ್ಧರಿಸಲಾಗಿದೆ.

**ತ್ಯಾಜ್ಯ ವಿಂಗಡಣೆ ಬುಟ್ಟಿ ವಿತರಣೆ:** ನಗರದ ಆಯ್ದ ವಾರ್ಡ್‌ಗಳಲ್ಲಿ ತ್ಯಾಜ್ಯ ವಿಂಗಡಣೆಗಾಗಿ ಪ್ರತಿ ಮನೆಗೆ ಪ್ಲಾಸ್ಟಿಕ್ ಬುಟ್ಟಿಗಳನ್ನು ನೀಡಲು ಪ್ರಾಥಮಿಕವಾಗಿ 25 ಲಕ್ಷ ರೂ. ಕಾಯ್ದಿರಿಸಲಾಗಿದೆ.

**ಜರ್ಮನ್ ಮಾದರಿ ವೃತ್ತ ಅಭಿವೃದ್ಧಿ:** ಜರ್ಮನ್ ಮಾದರಿಯಲ್ಲಿ ನಗರದ ಆಯ್ದ ವೃತ್ತಗಳನ್ನು ಅಭಿವೃದ್ಧಿ ಪಡಿಸಲು ಅಂದಾಜು 2 ಕೋಟಿ ರೂ. ಯೋಜನೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

**ಡ್ರೋನ್ ಸರ್ವೇ :** ಪಾಲಿಕೆ ವ್ಯಾಪ್ತಿಯ ಖಾಸಗಿ, ಸರ್ಕಾರದ ಹಾಗೂ ಅಭಿವೃದ್ಧಿ ಕಾಮಗಾರಿಗಳ ಮತ್ತು ಬಾಕಿ ಇರುವ ತೆರಿಗೆ ವಸೂಲಿ ಮಾಡುವ ಬಗ್ಗೆ ಡ್ರೋನ್ ಸರ್ವೇ ಮಾಡಲು ಅಂದಾಜು 5 ಕೋಟಿ ರೂ. ಕಾಯ್ದಿರಿಸಲಾಗಿದೆ.

**ಸ್ವತ್ತು ಸಂರಕ್ಷಣೆಗೆ 2 ಕೋಟಿ:** ಪಾಲಿಕೆ ಒಡೆತನದ ಪಾರ್ಕ್, ಖಾಲಿ ನಿವೇಶನಗಳನ್ನು ಗುರುತಿಸಿ ಸರ್ವೇ ಮಾಡಿ ಹದ್ದುಬಸ್ತು ಮಾಡಿ ನಾಮಫಲಕ ಅಳವಡಿಸಿ ಸಂರಕ್ಷಿಸಲು ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ 2 ಕೋಟಿ ರೂ. ಕಾಯ್ದಿರಿಸಲಾಗಿದೆ.

**ಪಾರ್ಕ್ ಅಭಿವೃದ್ಧಿ :** ಆಯ್ದ ಉದ್ಯಾವನಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದ್ದು, ಖಾಸಗಿ ಸಹಭಾಗಿತ್ವದಲ್ಲಿ ಈ ಯೋಜನೆ ಜಾರಿಗೊಳಿಸಲಾಗುತ್ತದೆ. ಒಟ್ಟಾರೆ ಉದ್ಯಾನವನಗಳ ಅಭಿವೃದ್ಧಿಗೆ 336.50 ಲಕ್ಷ ರೂ ಕಾಯ್ದಿರಿಲಾಗಿದೆ.

**ಜಲ ಸಾಹಸ ಕ್ರೀಡೆ, ದೋಣಿ ವಿಹಾರ ಕೇಂದ್ರ :** ಬಾತಿ ಕೆರೆ ಅಭಿವೃದ್ಧಿ ಪಡಿಸಿ ಖಾಸಗಿ ಸಹಭಾಗಿತ್ವದೊಂದಿಗೆ ದೋಣಿ ವಿಹಾರ, ಜಲ ಸಾಹಸ ಕ್ರೀಡೆ ಇತ್ಯಾದಿಯನ್ನು ಕೈಗೊಳ್ಳಲು ಪ್ರಾಥಮಿಕವಾಗಿ 1 ಕೋಟಿ ರೂ. ಅನುದಾನ ಒದಗಿಸಲಾಗುತ್ತಿದೆ.

ಬಜೆಟ್ ಸಭೆಯಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಮನೆ ಗಣೇಶ್, ಉರುಬಾನ್, ಸುಧಾ ಇಟ್ಟಿಗುಡಿ ಮಂಜುನಾಥ್, ಆಶಾ ಉಮೇಶ್, ವಿಪಕ್ಷ ನಾಯಕ ಆರ್.ಎಲ್. ಶಿವಪ್ರಕಾಶ್ ಇತರರು ಇದ್ದರು.

### ಖಾಲಿ ಚೊಂಬು ಪ್ರದರ್ಶಿಸಿದ ಬಿಜೆಪಿ

**ಕಾಂಗ್ರೆಸ್ ಬಜೆಟ್ ಮಂಡಿಸುತ್ತಿದ್ದಂತೆ ಖಾಲಿ ಚೊಂಬು ಹಿಡಿದ ಬಿಜೆಪಿ ಸದಸ್ಯರು 'ಇದೊಂದು ಖಾಲಿ ಚೊಂಬು ಬಜೆಟ್ ಆಗಿದೆ. ಇದರಲ್ಲಿ ಹೊಸದಾಗಿ ಏನನ್ನೂ ಘೋಷಿಸಿಲ್ಲ ಎಂದು ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರು, 'ಇದೊಂದು ಉತ್ತಮ ಬಜೆಟ್' ಆಗಿದೆ. ನಿಮ್ಮ ತಲೆ ಖಾಲಿಯಾಗಿದೆ. ಅದ್ದರಿಂದ ಚೊಂಬು ಪ್ರದರ್ಶಿಸುತ್ತಿದ್ದೀರಿ ಎಂದು ತಿರುಗೇಟು ನೀಡಿದರು.**

## ವಸತಿ ಯೋಜನೆಯಲ್ಲಿ ಅವ್ಯವಹಾರ

ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಆಶ್ರಯ ವಸತಿ ಯೋಜನೆಯಡಿ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡುತ್ತಿಲ್ಲ ಎಂದು ಸದಸ್ಯರಾದ ಶಿವಾನಂದ್, ಕೆ.ಎಂ. ವೀರೇಶ್ ಸಭೆಯಲ್ಲಿ ಆರೋಪಿಸಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಗ್ರಾಮಗಳನ್ನು ದಾವಣಗೆರೆಗೆ ಸೇರಿಸಿಕೊಂಡು ನಿವೇಶನ ಹಂಚಿಕೆ ಮಾಡಲಾಗಿತ್ತು. ಆಗ ಒಂದು ಸಂವಿಧಾನ, ಕಾನೂನು ಇತ್ತು, ಈಗ ಒಂದು ಕಾನೂನು, ಸಂವಿಧಾನ ಇದೆಯಾ ಎಂದು ಪ್ರಶ್ನಿಸಿದರು.

ಹಕ್ಕುಪತ್ರ ನೀಡುವುದು ನಾನಲ್ಲ. ಆಶ್ರಯ ಸಮಿತಿ. ಈ ಸಮಿತಿಯ ಅಧ್ಯಕ್ಷರನ್ನು ಕೇಳಿ. ದಾವಣಗೆರೆ ದಕ್ಷಿಣದಲ್ಲಿ ಹೆಚ್ಚು ಕಡಿಮೆ ಆಗಿದೆ. ಈ ಕಾರಣಕ್ಕೆ ಲೋಕಾಯುಕ್ತ ತನಿಖೆ ನಡೆಯುತ್ತಿದೆ. ವರದಿ ಬಂದ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ಮೇಯರ್ ಕೆ. ಚಮನ್ ಸಾಬ್ ಹೇಳಿದರು.

ದಾವಣಗೆರೆ ಭೀಷ್ಮ ಎಂದು ಕರೆಯಿಸಿಕೊಳ್ಳುವ ಎಸ್. ಎ. ರವೀಂದ್ರನಾಥ್ ಅವರು ಬಡವರಿಗೆ ಸೂರು ಒದಗಿಸುವ ಕೆಲಸ ಮಾಡಿದ್ದಾರೆ. ಆದರೆ ಜನರು ಟೆಂಟ್ ಹಾಕಿಕೊಂಡು, ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದಾರೆ. ಚೇಳು, ಹಾವುಗಳ ಕಾಟದ ಮಧ್ಯೆ ಬದುಕು ಸಾಗಿಸುತ್ತಿದ್ದು, ಅವರ ಕಷ್ಟವನ್ನಾದರೂ ಅರಿತು ಹಕ್ಕುಪತ್ರ ನೀಡುವಂತೆ ಕೆ.ಎಂ. ವೀರೇಶ್ ಒತ್ತಾಯಿಸಿದರು.

ಆಗ ಮಧ್ಯಪ್ರವೇಶಿಸಿದ ಕಾಂಗ್ರೆಸ್ ಸದಸ್ಯರಾದ ಎ. ನಾಗರಾಜ್ ಮತ್ತು ಗಡಿಗುಡಾಳ್ ಮಂಜುನಾಥ್, ಫಲಾನುಭವಿಗಳ ಆಯ್ಕೆ ವಿಚಾರದಲ್ಲಿ ಭಾರೀ ಹಗರಣ ನಡೆದಿದೆ. ಹಣ ಪಡೆದು ನಿವೇಶನ ನೀಡಲಾಗುತ್ತಿದೆ. ನಾಳೆಯೇ ಹಣ ಕೊಟ್ಟವರನ್ನು ಕರೆದುಕೊಂಡು ಬರುತ್ತೇನೆ ಎಂದರು. ಆಗ ಬಿಜೆಪಿ ಸದಸ್ಯರು ಕರೆದುಕೊಂಡು ಬನ್ನಿ. ಹಣ ಕೊಟ್ಟವರ ಹೆಸರು ಬಹಿರಂಗಪಡಿಸಿ. ಇಲ್ಲಿಗೆ ಕರೆಯಿಸಿ ಎಂದು ಸವಾಲೆಸೆದರು. ಈ ಸವಾಲು ಸ್ವೀಕರಿಸಿದ ಎ. ನಾಗರಾಜ್ ನಾಳೆಯೇ ಕರೆದುಕೊಂಡು ಬರುತ್ತೇನೆ. ಹಣ ವಾಪಸ್ ಕೊಡಿಸಬೇಕು ಎಂದರು. ಈ ವೇಳೆ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಕೊನೆಗೆ ಹಗರಣವನ್ನು ಸಿಒಡಿ ತನಿಖೆಗೆ ವಹಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ಚಮನ್ ಸಾಬ್ ಹೇಳಿದರು.

## ವಿಪಕ್ಷ-ಆಡಳಿತ ಪಕ್ಷ ವಾಕ್ಸಮರ

**(1ನೇ ಪುಟದಿಂದ)** ಬಿಲ್ ಹೆಚ್ಚು ಬರುತ್ತಿತ್ತು, ಈಗ ಎಲ್ಲವೂ ಸರಿಹೋಗಿದೆ ಎಂದರು.

ನಮ್ಮ ಭಾಗದ ಜನರಿಗೆ ಜಲಸಿರಿ ಏನೆಂಬುದೇ ಗೊತ್ತಿಲ್ಲ ಎಂದು ಶಿವಪ್ರಕಾಶ್ ಹೇಳಿದರೆ, ನಮ್ಮ ವಾರ್ಡ್‌ನಲ್ಲಿ ಅರ್ಧದಷ್ಟು ಕಾಮಗಾರಿ ನಡೆದಿಲ್ಲ ಎಂದು ಕೆ.ಎಂ. ವೀರೇಶ್ ಹೇಳಿದರು. ಈ ಹಿಂದೆ ವಿಶಾಖಪಟ್ಟಣಂಗೆ ಪ್ರವಾಸ ಹೋಗಿದ್ದಾಗ ಅಲ್ಲಿ ನೀರಿನ ಬಿಲ್ 184 ರೂ. ದಾಟಿಲ್ಲ. ಆದರೆ ಇಲ್ಲಿ ಸಾವಿರಾರು ರೂ. ಬಿಲ್ ಬರುತ್ತಿದೆ ಎಂದು ಶಿವಾನಂದ ತರಾಟೆಗೆ ತೆಗೆದುಕೊಂಡರು.

ಈ ವೇಳೆ ನಮ್ಮ ಮನೆಯ ಬಿಲ್ ಕಡಿಮೆ ಬಂದಿದೆ ನೋಡಿ ಎಂದು ಎ.ನಾಗರಾಜ್ ತೋರಿಸಿದಾಗ, ಕಾಂಗ್ರೆಸ್ ಪಕ್ಷದವರು ಎಂದು ಕಡಿಮೆ ಬಿಲ್ ಬಂದಿರಬಹುದು. ಈ ಬಗ್ಗೆ ತನಿಖೆಯಾಗಲಿ ಎಂದು ಎಸ್.ಟಿ. ವೀರೇಶ್ ಹೇಳಿದರು. ಮೇಯರ್ ಚಮನ್ ಸಾಬ್, ಇದು ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನ, ನಿಮ್ಮ ಪ್ರಕಾರ ತಪ್ಪಿದೆ. ನಮ್ಮ ಪ್ರಕಾರ ಎಲ್ಲವೂ ಸರಿ ಇದೆ. ಬೇರೆ ವಿಷಯ ಚರ್ಚಿಸೋಣ ಎಂದು ವಾಕ್ಸಮರಕ್ಕೆ ತೆರೆ ಎಳೆದರು.

## ಬೀದಿ ನಾಯಿಗಳ ಬಗ್ಗೆ ಗಂಭೀರ ಚರ್ಚೆ

ನಗರದಲ್ಲಿ ಬೀದಿ ನಾಯಿಗಳ ಹಾವಳಿ ಬಗ್ಗೆ ಇಂದಿನ ಸಭೆಯಲ್ಲಿ ಗಂಭೀರ ಚರ್ಚೆ ನಡೆಯಿತು. ಸದಸ್ಯರು ಪಕ್ಷಭೇದ ಮರೆತು ನಾಯಿಗಳ ಕಡಿವಾಣಕ್ಕಾಗಿ ಒತ್ತಾಯಿಸಿದರು.

ಪಾಲಿಕೆಯಿಂದ ಸಂತಾನ ಹರಣ ಶಸ್ತ್ರ ಚಿಕಿತ್ಸೆಗಾಗಿ ಪ್ರತಿ ವರ್ಷ 1 ಕೋಟಿ ರೂ. ಖರ್ಚು ಮಾಡಿದರೂ ನಾಯಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ ಎಂದು ಶಿವಾನಂದ್ ಚರ್ಚೆ ಆರಂಭಿಸಿದರು. ಸಾಕಷ್ಟು ಚರ್ಚೆಯ ನಂತರ ಮೇಯರ್ ಚಮನ್ ಸಾಬ್ ಮಾತನಾಡಿ, ನಾಯಿಗಳ ಕಡಿವಾಣದ ಬಗ್ಗೆ ಚರ್ಚಿಸಲು ಪ್ರಾಣಿ ದಯಾ ಸಂಘದವರನ್ನೂ ಸೇರಿಸಿಕೊಂಡು ಒಂದು ಸಭೆ ನಡೆಸೋಣ ಎಂದರು.

ನಾಯಿ ಕಡಿದವರಿಗೆ ಕೊಡುವ ಪರಿಹಾರ ಹೆಚ್ಚಿಸುವ ಸಲಹೆ ಕೇಳಿ ಬಂದಾಗ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಆಯುಕ್ತೆ ರೇಣುಕಾ ಹೇಳಿದರು.

## ವರದಿಗಾರರ ಕೂಟಕ್ಕೆ ನಿವೇಶನ

ವಿದ್ಯಾನಗರದಲ್ಲಿ 40x60 ಅಡಿಯ ನಿವೇಶವನ್ನು ಜಿಲ್ಲಾ ವರದಿಗಾರರ ಕೂಟಕ್ಕೆ ನೀಡಲು ಹಾಗೂ ಕಟ್ಟಡ ನಿರ್ಮಾಣಕ್ಕೆ ಅನುದಾನ ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ವೇಳೆ ನಾಮ ನಿರ್ದೇಶಿತ ಸದಸ್ಯ ಸುರಭಿ ಶಿವಮೂರ್ತಿ, ವರದಿಗಾರರ ಕೂಟದ ಕಟ್ಟಡ ನಿರ್ಮಾಣಕ್ಕೆ ವೈಯಕ್ತಿಕವಾಗಿ 1 ಲಕ್ಷ ರೂ. ಅನುದಾನ ನೀಡುವುದಾಗಿ ಘೋಷಿಸಿದರು.

## ಕ್ರೀಡಾಪಟುಗಳಿಗೆ ಸಿಗದ ಪ್ರೋತ್ಸಾಹ : ವೀರೇಶ್ ಆರೋಪ

ಈ ಬಾರಿಯ ಬಜೆಟ್‌ನಲ್ಲಿ ಗರಡಿ ಕುಸ್ತಿ ಪಟುಗಳನ್ನು ಉತ್ತೇಜಿಸಲು ಹಾಗೂ ಕುಸ್ತಿ ಕ್ರೀಡೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಮೇಯರ್ ಕಪ್ ಪಂದ್ಯಾವಳಿಗೆ 20 ಲಕ್ಷ ರೂ. ಅನುದಾನ ಮೀಸಲಿರಿಸಲಾಗಿದೆ. ಆದರೆ ಯಾವ ವರ್ಷವೂ ಮೇಯರ್ ಕಪ್ ಕ್ರೀಡೆ ನಡೆಯಲಿಲ್ಲ. ಇದು ಬರೀ ಲೆಕ್ಕ ತೋರಿಸಲಷ್ಟೇ ಮೀಸಲಾಗಿದೆ ಎಂದು ಕೆ.ಎಂ. ವೀರೇಶ್ ಆರೋಪಿಸಿದರು.

# ಸಿಂಗ್ರಿಹಳ್ಳಿಯಲ್ಲಿ ಸವಿತಾ ಮಹರ್ಷಿ ಜಯಂತಿ



ಹರಪನಹಳ್ಳಿ, ಫೆ. 6- ತಾಲ್ಲೂಕಿನ ಸಿಂಗ್ರಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಭಗವಾನ್ ಸವಿತಾ ಮಹರ್ಷಿ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಹಾಲೇಶ್, ಸದಸ್ಯರಾದ ಈ. ರಾಮಪ್ಪ, ಶಿಕ್ಷಕರಾದ ನೀಲಪ್ಪ, ಶಿವರಾಜ್ ಅರಸ್, ಮಂಜು ನಾಯಕ್, ಮೋಹನ್ ಕುಮಾರ್ ನಾಯಕ್, ಹೇಮಾವತಿ, ಪ್ರೇಮಾ, ಲೀಲಾ, ನೇತ್ರಮ್ಮ ರುಕ್ಮಿಣಿ, ಸಲ್ಮಾ ಅಂಗನವಾಡಿ ಕಾರ್ಯಕರ್ತೆ ಬಿ. ನೇತ್ರಮ್ಮ, ಪಂಚಾಯ್ತಿ ಸಿಬ್ಬಂದಿ ಟಿ.ಇ. ಫಕೀರಮ್ಮ, ಸಿಬ್ಬಂದಿ ದ್ರಾಕ್ಷಾಯಿಣಿ, ಗ್ರಾ.ಪಂ. ಸದಸ್ಯರಾದ ಎಸ್.ಎನ್. ಮಂಜುನಾಥ್ ಕಾರಬಾರಿ, ರಾಜನಾಯಕ್, ಕೆ.ಹೆಚ್. ಕುಬೇಂದ್ರಪ್ಪ, ಊರಿನ ಮುಖಂಡರಾದ ಹಳ್ಯಾರ್ ನಾಗರಾಜ್, ಎಂ. ಮಲ್ಲೇಶಪ್ಪ, ಕುಮಾರ್ ನಾಯಕ್, ಟಿ. ಕುಮಾರಪ್ಪ, ಚನ್ನಾಪುರ ಬಸವರಾಜ್, ಟಿ.ಪಿ. ಹನುಮಂತಪ್ಪ, ವೆಂಕಳ್ಳಿ ಗೋಣಿಬಸಪ್ಪ ಮತ್ತಿತರರು ಉಪಸ್ಥಿತರಿದ್ದರು.

# 'ಡಂಕಿ' ಮಾರ್ಗದಲ್ಲಿ ಕನಸು ಕಂಡವರಿಗೆ ಈಗ ದುಸ್ವಪ್ನ

## ಅಮೆರಿಕದಿಂದ ಹಸ್ತಾಂತರಗೊಂಡವರಿಗೀಗ ಸಾಲದ ಹೊರೆಯ ಚಿಂತೆ

ಕುರುಕ್ಷೇತ್ರ, ಫೆ.6 - ಅಮೆರಿಕದಲ್ಲಿ ಉತ್ತಮ ಜೀವನ ಕಾಣಬಹುದು ಎಂಬ ಕನಸಿನೊಂದಿಗೆ 'ಡಂಕಿ' ಮಾರ್ಗದ ಮೂಲಕ ತೆರಳಿದವರಿಗೆ ಈಗ ಹಸ್ತಾಂತರದ ದುಸ್ವಪ್ನ ಎದುರಾಗಿದೆ.

ಅಮೆರಿಕಗೆ ವಾಮಮಾರ್ಗದ ಮೂಲಕ ತೆರಳಲು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದವರು, ಈಗ ಹಸ್ತಾಂತರಕ್ಕೆ ಗುರಿಯಾಗಿ ಭಾರತಕ್ಕೆ ಮರಳಿದ್ದಾರೆ. ಇದರ ಜೊತೆಗೆ ದೊಡ್ಡ ಸಾಲವನ್ನು ಹೊತ್ತುಕೊಂಡಿದ್ದಾರೆ.

ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಹಲವರು ಕಾಡುಮೇಡುಗಳ ಮೂಲಕ ಸಾಗಿ ನದಿಗಳನ್ನು ದಾಟಿ ಅಮೆರಿಕಗೆ ತಲುಪಿದ್ದರು. ಅಮೆರಿಕದ ಅಧಿಕಾರಿಗಳು ಇವರನ್ನು ಬಂಧಿಸಿ ಭಾರತಕ್ಕೆ ಹಸ್ತಾಂತರಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ 27 ವರ್ಷದ ರಾಬಿನ್ ಹಂಡ ಅವರ ತಂದೆ ಮಂಜಿತ್ ಸಿಂಗ್, ನನ್ನ ಮಗ ಗಯಾನ, ಬ್ರೆಜಿಲ್, ಪೆರು, ಕೊಲಂಬಿಯಾ, ಇಕ್ವೆಡಾರ್ ಹಾಗೂ ಗ್ವಾಟೆಮಾಲಾ ಮೂಲಕ ಅಮೆರಿಕಾಗೆ ತಲುಪಿದ್ದ ಎಂದು ಹೇಳಿದ್ದಾರೆ.

ಹಲವು ದಿನಗಳ ಕಾಲ ಹಸಿವೆಯಿಂದ ಬಳಲಿ ಅಂತಿಮವಾಗಿ ಮೆಕ್ಸಿಕೋ - ಅಮೆರಿಕ ಗಡಿಗೆ ತಲುಪಿದ್ದ. ಇದಕ್ಕಾಗಿ ಆತ ಮಧ್ಯವರ್ತಿಗಳಿಗೆ ಸುಮಾರು 45 ಲಕ್ಷ ರೂ.ಗಳನ್ನು ಪಾವತಿಸಿದ್ದ. ಮಧ್ಯವರ್ತಿಗಳು ಆತನ ಮೊಬೈಲ್ ಸಹ ಕಸಿದುಕೊಂಡಿದ್ದರು ಎಂದು ಸಿಂಗ್ ಹೇಳಿದ್ದಾರೆ.

ಕುರುಕ್ಷೇತ್ರ ಜಿಲ್ಲೆಯ ಇಸ್ಮಾಯಿಲ್‌ಬಾದ್ ಹಳ್ಳಿಯ 12ನೇ ತರಗತಿಯವರೆಗೆ ಓದಿರುವ ಹಂಡ ಕಳೆದ ವರ್ಷ ಜುಲೈ ತಿಂಗಳಲ್ಲಿ ಭಾರತವನ್ನು ಬಿಟ್ಟು ಅಮೆರಿಕ ಕಡೆ ತೆರಳಿದ್ದರು.

ಈ ಮಾರ್ಗದ ಮಧ್ಯೆ ಅವರನ್ನು ಮೆಕ್ಸಿಕೋದಲ್ಲಿರುವ ವಲಸೆ ಮಾಫಿಯಾ ವಶಕ್ಕೆ ತೆಗೆದುಕೊಂಡು ಹಣಕ್ಕಾಗಿ ಪೀಡಿಸಿತ್ತು. ಅವರಿಗೆ ಮಗ 20 ಲಕ್ಷ ರೂ. ಕೊಟ್ಟಿದ್ದ ಎಂದು ಸಿಂಗ್ ತಿಳಿಸಿದ್ದಾರೆ.

ನನ್ನ ಹಿರಿಯ ಮಗ ವ್ಯಾಸಂಗಕ್ಕಾಗಿ ಆಸ್ಟ್ರೇಲಿಯಾಗೆ ತೆರಳಿದ್ದ. ಕಿರಿಯ ಮಗ ಹಂಡ ಅಮೆರಿಕಾಗೆ ಹೋಗಬೇಕು ಎಂದು ಪಟ್ಟು ಹಿಡಿದಿದ್ದ. ಅಮೆರಿಕದ ಕನಸು ಈಗ ಸಾಲದ ಹೊರೆ ತಂದಿದೆ ಎಂದು ಸಿಂಗ್ ಹೇಳಿದ್ದಾರೆ.

ಅಮೆರಿಕದಲ್ಲಿ ಹಂಡಗೆ ನೆಲೆ ಕೊಡಿಸುವುದಾಗಿ ಹೇಳಿ ಟ್ರಾವೆಲ್ ಏಜೆಂಟರು ಮೋಸ ಮಾಡಿದ್ದಾರೆ ಎಂದು ಸಿಂಗ್ ದೂರಿದ್ದಾರೆ.

ಹಂಡ ಸೇರಿದಂತೆ 104 ಭಾರತೀಯರನ್ನು ಅಮೆರಿಕದಿಂದ ಹಸ್ತಾಂತರಿಸಲಾಗಿದೆ. ಹಲವು ರಾಜ್ಯಗಳ ಅಕ್ರಮ ವಲಸಿಗರನ್ನು ಅಮೆರಿಕದ ಸೈನಿಕ ವಿಮಾನ ಅಮೃತ್‌ಸರ ವಿಮಾನ ನಿಲ್ದಾಣಕ್ಕೆ ತಂದಿಳಿಸಿತ್ತು.

ಕುರುಕ್ಷೇತ್ರ ಜಿಲ್ಲೆಯ ಚಮ್ಮುಕಲಾನ್ ಹಳ್ಳಿಯ 18 ವರ್ಷದ ಖುಶ್‌ಪ್ರೀತ್ ಸಿಂಗ್ ಅವರು ಅಮೆರಿಕಾಗೆ ತೆರಳಲು 40 ಲಕ್ಷ ರು. ಖರ್ಚು ಮಾಡಿದ್ದರು. ಅವರ ತಂದೆ ಜಸ್ವಂತ್ ಸಿಂಗ್ ತಮ್ಮ ಹೊಲ ಅಡ ಇಡುವ ಮೂಲಕ ಈ ಹಣ ಹೊಂದಿಸಿದ್ದರು.

ಅಮೆರಿಕ ಗಡಿ ತಲುಪಿರುವುದಾಗಿ 15 ದಿನಗಳ ಹಿಂದೆ ನನ್ನ ಮಗ ಫೋನ್ ಮೂಲಕ ತಿಳಿಸಿದ್ದ. ಆನಂತರ ಸಂಪರ್ಕ ಕಡಿತವಾಗಿತ್ತು ಎಂದು ಜಸ್ವಂತ್ ಸಿಂಗ್ ಹೇಳಿದ್ದಾರೆ.

ಅಮೆರಿಕದ ಸೈನಿಕ ವಿಮಾನ ಅಮೃತಸರ್‌ಗೆ ಬಂದಿಳಿದ ನಂತರವೇ ಮಗನ ಹಸ್ತಾಂತರದ ಬಗ್ಗೆ ಗೊತ್ತಾಯಿತು. ಮಗ ಸುರಕ್ಷಿತವಾಗಿ ವಾಪಸ್ ಬಂದಿರುವುದಕ್ಕೆ ಸಂತೋಷವಾಗಿದೆ. ಆದರೆ ಸಾಲದ ಹೊರಗೆ ಸಿಲುಕಿದ್ದೇವೆ ಎಂದು ಸಿಂಗ್ ಹೇಳಿದ್ದಾರೆ.


**(KHB) ಸೈಟ್ ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್ ಹೊಸ ಕುಂದವಾಡ 30X40, 30X50, 40X60, 50X80, 20X30, 80X60 ಇನ್ನು ಅನೇಕ
ಕಿರಣ್ ಬೂಸ್ನೂರ್ (ಏಜೆಂಟ್)
94824 63409
97315 63409, 98440 63409

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜ್ ಹಿಂಭಾಗ 24x45 West, ವಿದ್ಯಾನಗರದಲ್ಲಿ 30x33 South, ಆಂಜನೇಯ ಬಡಾವಣೆಯಲ್ಲಿ 30x50 North, 30x55 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ, 50x80 East, 40x60 East, 40x42 Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ನುರಿತ ಹಾಗೂ ಅನುಭವವಿರುವ ಸೇಲ್ಸ್ ಗರ್ಲ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
G.J ಕಾಸ್ಮೆಟಿಕ್ಸ್ ಪ್ಯಾಲೇಸ್ (ಗೌಡ್ರ ಜಯದೇವಪ್ಪ) ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ.
ಫೋ. 9901969595

**ಬಾಡಿಗೆಗೆ**
Old PB Road, Trends Man, Titan World Bldg, Covered Terrace - 3600 Sqft Basement-30x15 Godowns
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮೊದಲನೇ ಮಹಡಿ 3500 ಅಡಿಗಳು
94480 28103

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಕೆಲಸಕ್ಕೆ ಯುವತಿಯರು ಬೇಕಾಗಿದ್ದಾರೆ**
ಶ್ರೀ ಶ್ರೀಧರ ಹೋಂ ಕೇರ್ ಸರ್ವೀಸ್ ನಲ್ಲಿ ಆಫೀಸ್ ಕೆಲಸಕ್ಕಾಗಿ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಅರ್ಹತೆಗಳು: ಯಾವುದೇ ಪದವಿ ಮತ್ತು ಕಂಪ್ಯೂಟರ್ ಜ್ಞಾನ ಅವಶ್ಯಕ.
9980503266, 7975012450

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ 7 ಗುಂಟೆ ಇರುವ ಅಡಿಕೆ ತೋಟ ಮಾರಾಟಕ್ಕಿದೆ. ಜಗಳೂರು ರೋಡ್, ದಾವಣಗೆರೆಯಿಂದ 10 ಕಿ.ಮೀ ಹತ್ತಿರದಲ್ಲಿದೆ.
95130 15544

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಹುಡುಗರು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಇರುವ ಕಿರಾಣಿ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 10 ರಿಂದ ರಾತ್ರಿ 8.30 ರವರೆಗೆ. ಮಧ್ಯಾಹ್ನ ಊಟದ ಜೊತೆ ಟೀ ಮತ್ತು ಸ್ನ್ಯಾಕ್ಸ್ ವ್ಯವಸ್ಥೆ ಇದೆ. (11000 ಸಂಬಳ) ಅನುಭವ ಇರುವವರಿಗೆ ಆದ್ಯತೆ.
81340 34264, 81975 17215

**ಜಾಗ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿ ವ್ಯಾಪ್ತಿಗೆ ಬರುವ ನಗರ ಪ್ರದೇಶಕ್ಕೆ ಹೊಂದಿಕೊಂಡಿರುವ 21.5 ಗುಂಟೆ ಮಾರಾಟಕ್ಕಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
77957 12332

**ಅಂಗಡಿ ಮಾರಾಟಕ್ಕಿದೆ**
ನಗರದ ಕೊಂಡಜ್ಜಿ ರಸ್ತೆಯಲ್ಲಿ ಉತ್ತಮ ಸ್ಥಿತಿಯಲ್ಲಿರುವ, ಚಾಲ್ತಿಯಲ್ಲಿರುವ ಬುಕ್ ಸ್ಟಾಲ್ ಕಡಿಮೆ ಬೆಲೆಗೆ ಮಾರಾಟಕ್ಕಿದೆ.
93804 93191, 9591000198

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**WANTED**
Male candidates any degree with computer knowledge is must. Accomondation & food will be provided
Monthly Salary : 8000/-
Whats app : 99887 72291
P.B. Road, Davanagere

**ಸೈಟುಗಳು ಮಾರಾಟಕ್ಕಿವೆ**
ಎರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಉಚಿತ ಕ್ಯಾನ್ಸರ್ ರೋಗದ ತಪಾಸಣೆ**
ಆನ್ಸರ್ ಫಾರ್ ಕ್ಯಾನ್ಸರ್ ಖ್ಯಾತಿಯ ಡಾ॥ ರಮೇಶ್ ಅವರು ಇದೇ ಪ್ರಥಮ ಬಾರಿಗೆ ದಾವಣಗೆರೆಯ ಅನ್ವಯ ಆಯುರ್ವೇದ ಆಸ್ಪತ್ರೆಯಲ್ಲಿ ಪಂಚಗವ್ಯ ಆಧಾರಿತ ಕ್ಯಾನ್ಸರ್ ಚಿಕಿತ್ಸೆಗೆ ಉಚಿತವಾಗಿ ತಪಾಸಣೆ ನಡೆಸುತ್ತಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
86186 42929

**ಮಳಿಗೆ ಬಾಡಿಗೆಗೆ ಇದೆ**
ಇಂಡಸ್ಟ್ರೀಯಲ್ ಏರಿಯಾ (SAR ನಗರ), ಲೋಕಿಕೆರೆ ರಸ್ತೆ, ಸರ್ಕಲ್‌ನಲ್ಲಿ ವಾಣಿಜ್ಯ ಮಳಿಗೆಗಳು, 1ನೇ ಮಹಡಿಯಲ್ಲಿ 1000, 600 600 sqft 3 ಮಳಿಗೆಗಳು ಬಾಡಿಗೆಗೆ ಇವೆ.
9900939161, 7676477320

**ಅನುಬಂಧ ಮ್ಯಾಟ್ರಿಮೋನಿ (ರಿ)**
ನೋಂದಣಿ ಉಚಿತ
ವೀರಶೈವ ಲಿಂಗಾಯತ ವಧು-ವರರ ಮಾಹಿತಿ ಕೇಂದ್ರ.
www.anubandhamatrimony.com
ವೀರಪ್ಪ ಕಾಂಪ್ಲೆಕ್ಸ್, ಸರ್.ಎಂ.ವಿ. ಕಾಲೇಜ್ ಎದುರು, ಹದಡಿ ರೋಡ್, ದಾವಣಗೆರೆ.
97431 62444, 97431 62555

**RENT**
Shop (Malige) 12x10 feet for Commercial Purpose at P.J Ext, Chetana Hotel Road , 4th main, 7th cross Ground Floor. Contact.
9448590794 , 8073742133.

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**12 A & 80G ರಿಜಿಸ್ಟ್ರೇಷನ್**
GST ರಿಜಿಸ್ಟ್ರೇಷನ್, MSME ರಿಜಿಸ್ಟ್ರೇಷನ್ ಕಂಪನಿ, LLP, PVT, LTD ರಿಜಿಸ್ಟ್ರೇಷನ್ CA ಅಪ್ರೂಡ್ ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ಕಡಿಮೆ ಬೆಲೆಗೆ ಮಾಡಲಾಗುತ್ತದೆ.
6363811591, 8618129962

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ) ದಾವಣಗೆರೆ.
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
www.hindusmatrimony.com
15-01-2025 ರಿಂದ 31-01-2025
ಎಲ್ಲಾ ಹಿಂದೂ ವಧುಗಳಿಗೆ
* (Free Registration)
80509 52637, 9380213677

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಆಫೀಸ್‌ಗೆ ಮಹಿಳೆಯರು, ಸೆಕ್ಯೂರಿಟಿ ಫೀಲ್ಡ್ ವರ್ಕ್‌ಗೆ ಪುರುಷರು ಮತ್ತು ಮಹಿಳೆಯರು, ಸೆಕ್ಯೂರಿಟಿ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ. ಹರಿಹರ to ದಾವಣಗೆರೆ.
63661 61287

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

**SHOP FOR RENT**
1000-sqft Amma Complex, Opp. Jadhav Dr.Clinic, Near Jayadeva Circle, Nituvalli Road, Davangere.
9901033555, 9945713192

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ**
ಪ್ರೇರಣಾ ಮೋಟರ್ಸ್, ಪಿಬಿ ರೋಡ್, ಮಾರವಾಡಿ ದೇವಸ್ಥಾನ ಮುಂಭಾಗ, ಆವರಗೆರೆ.
99458 58731
98440 94757, 98440 87069

**ROOM FOR RENT**
Single Attached room with all facilities available with wardrobe and cots system at MCC 'A' Block, Near Ram Krishna Ashrama, Beside Ganesh temple.
97405 69252

**ಲೋನ್ ಮಾಡಿಕೊಡಲಾಗುವುದು**
ನಿಮ್ಮ ಕಾರು ಅಥವಾ ಕಮರ್ಷಿಯಲ್ ವಾಹನ ಅಡವಿಟ್ಟಿದ್ದೀರಾ ಅಥವಾ ಫೈನಾನ್ಸ್‌ನಲ್ಲಿ ಲೋನ್ ಇದೆಯಾ ಇಂದೇ ಚಿಂತಿಸದೆ ಬಿಡಿಸಿಕೊಳ್ಳಿ ನಮ್ಮಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಮುಖಾಂತರ ಅತಿ ಕಡಿಮೆ ಬಡ್ಡಿ ದರದಲ್ಲಿ ಕಾರು ಹಾಗೂ ಕಮರ್ಷಿಯಲ್ ವಾಹನಗಳಿಗೆ ಲೋನ್ ಮಾಡಿಕೊಡಲಾಗುವುದು.
SK CONSULTING
97430 93568

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**REQUIRED**
House Keeping and Security Supervisor Required.
8105699985
8971504492

**LOST OF LAND DOCUMENT**
Chintan Mehata S/o Dinesh Chandra has allotted land from KIADB alloted 8030 sq. mtr of land in plot No. 2 of Sarathi kurubarahalli 1st Phase Industrial Area, Davanagere District. This Document lost on 16.01.2025 at Harihara to Davanagere P.B.road, while taking the xerox copy of the document. Lost report No.1463915 / 2025 dated 05.02.2025. If any one found this document kindly contact below number.
Chintan Mehata : 89564 75995

**REQUIRED**
Sales and marketing Male and Female - 8 Nos, Experienced Accountant Tally and GST - 2 Nos, Receptionist - 2 Nos.
Sree Devi Tiles and Stones Pvt, Ltd.
Near Ananda PU College Davangere - 3.
96118 98622
73490 50115

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ


ಮನೆಗೊಂದು ಮರ
ಊರಿಗೊಂದು ವನ

# ಶಾಲಾ ವಾಹನಗಳು ಸಂಚಾರಿ ನಿಯಮ ಪಾಲನೆ, ಸುಸ್ಥಿತಿ ನಿರ್ವಹಣೆ ಕಡ್ಡಾಯ

## ಖಾಸಗಿ ಶಾಲಾ ಆಡಳಿತ ಮಂಡಳಿ, ಮಕ್ಕಳ ರಕ್ಷಣಾ ಘಟಕ ಹಾಗೂ ವಿವಿಧ ಇಲಾಖೆ ಜಂಟಿ ಸಮಾಲೋಚನಾ ಸಭೆಯಲ್ಲಿ ಜಿಲ್ಲಾಧಿಕಾರಿ

ದಾವಣಗೆರೆ, ಫೆ.6- ಜಿಲ್ಲೆಯಲ್ಲಿನ ವಿವಿಧ ಶಾಲೆಗಳಿಗೆ ಕರೆದುಕೊಂಡು ಹೋಗುವ ಶಾಲಾ ವಾಹನಗಳು, ಮಕ್ಕಳ ರಕ್ಷಣೆ ದೃಷ್ಟಿಯಿಂದ ಸುರಕ್ಷತಾ ಕ್ರಮ ಅನುಸರಿಸುವುದು ಅನಿವಾರ್ಯವಾಗಿದೆ. ಸುರಕ್ಷತಾ ಕ್ರಮ ಪಾಲನೆ ಮಾಡದ ಶಾಲಾ ಸಂಸ್ಥೆಯ ವಾಹನಗಳ ಮೇಲೆ ಕಟ್ಟು ನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ.ಎಂ ಗಂಗಾಧರಸ್ವಾಮಿ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಬುಧವಾರ ಖಾಸಗಿ ಶಾಲಾ ಆಡಳಿತ ಮಂಡಳಿ, ಶಿಕ್ಷಣ ಇಲಾಖೆ, ಸಾರಿಗೆ, ಮಕ್ಕಳ ರಕ್ಷಣಾ ಘಟಕ ಮತ್ತು ಸ್ಮಾರ್ಟ್‌ಸಿಟಿ ಯೋಜನೆ ಅಧಿಕಾರಿಗಳೊಂದಿಗೆ ಜಂಟಿ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ 500ಕ್ಕಿಂತ ಹೆಚ್ಚು ಖಾಸಗಿ ಶಾಲೆಗಳು 1030ಕ್ಕೂ ಅಧಿಕ ಶಾಲಾ ಬಸ್‌ಗಳನ್ನು ಹೊಂದಿವೆ. ಆದರೆ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ರಕ್ಷಣಾ ಕ್ರಮಗಳನ್ನು ಎಲ್ಲಾ ಶಾಲೆಯವರು ಕಡ್ಡಾಯವಾಗಿ ಅನುಸರಿಸಬೇಕು ಎಂದು ಸೂಚನೆ ನೀಡಿದರು.

**ಜಿಪಿಎಸ್, ಸಿಸಿ ಕ್ಯಾಮೆರಾ ಅಳವಡಿಕೆ ಕಡ್ಡಾಯ :** ಶಾಲಾ ವಾಹನಗಳಲ್ಲಿ ಸಿಸಿ ಕ್ಯಾಮೆರಾ ಹಾಗೂ ಜಿಪಿಎಸ್ ಟ್ರ್ಯಾಕಿಂಗ್



ಸಿಸ್ಟಮ್ ಕಡ್ಡಾಯವಾಗಿ ಅಳವಡಿಸಬೇಕು. ವಾಹನ ಸಂಚರಿಸುವ ಸ್ಥಳಗಳ ಬಗ್ಗೆ ಸಂಸ್ಥೆಯವರು ಮೇಲ್ವಿಚಾರಣೆ ಮಾಡಬೇಕು ಎಂದರು.

ವಾಹನ ಚಾಲಕರು ಚಾಲನಾ ಪರವಾನಗಿ ಹೊಂದಿ ಕನಿಷ್ಠ 6 ವರ್ಷಗಳ ಅನುಭವ ಹೊಂದಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ಬಾಲಕಿಯರು ಇರುವ ವಾಹನದಲ್ಲಿ ಮಹಿಳಾ ಸಿಬ್ಬಂದಿ ಕಡ್ಡಾಯ. 40 ಕಿ.ಮೀ ವೇಗವನ್ನು ಮೀರಬಾರದು ಎಂದು ತಿಳಿಸಿದರು.

ಮಕ್ಕಳ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆದರೇ, ಅದನ್ನು ಪೋಕ್ಸೋ ಎಂದು ಪರಿಗಣಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

**ಪೋಷಕರೊಂದಿಗೆ ಸಭೆ :** ಮಕ್ಕಳನ್ನು ಕರೆದುಕೊಂಡು ಹೋಗುವಾಗ ಸಮಯವಾಗಿದೆ ಎಂದು ವಾಹನವನ್ನು ವೇಗವಾಗಿ ಚಲಾಯಿಸುವ ಬದಲಾಗಿ, ಪೋಷಕರೊಂದಿಗೆ ಸಭೆ ನಡೆಸಿ ಮಕ್ಕಳನ್ನು ನಿಗದಿತ ಸ್ಥಳಕ್ಕೆ ಮೊದಲೇ ಕರೆ ತರಲು ಮನವರಿಕೆ ಮಾಡಿಕೊಡಬೇಕು.

ಸಮಯವಾಗಿದೆ ಎಂದು ವಿವಿಧೆಡೆ ಸಿಗ್ನಲ್‌ಗಳನ್ನು ಜಂಪ್ ಮಾಡಿ ಸಂಚರಿಸುವಂತಿಲ್ಲ. ಸಿಗ್ನಲ್ ಜಂಪ್ ಮಾಡಿರುವುದು ಕಂಡು ಬಂದಲ್ಲಿ, ಅಂತಹ ವಾಹನ ನೋಂದಣಿ ಮತ್ತು ಚಾಲಕರ ಪರವಾನಗಿಯನ್ನು ರದ್ದು ಪಡಿಸಿ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಸಂಚಾರಿ ನಿಯಮ ಪಾಲಿಸದಿರುವುದು ಹಾಗೂ ಅಜಾಗರೂಕ ಚಾಲನೆ ಮಾಡುವುದರಿಂದಲೇ ಪ್ರತಿನಿತ್ಯ ಅನೇಕ ಅಪಘಾತಗಳು ಸಂಭವಿಸುತ್ತಿವೆ. ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಎಲ್ಲಾ ಶಾಲಾ ವಾಹನಗಳು ಮೋಟಾರು ವಾಹನ ಕಾಯಿದೆ ಮತ್ತು ಸಂಚಾರಿ ನಿಯಮ ಪಾಲನೆ ಮಾಡುವ ಜತೆಗೆ ವಾಹನಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

### ಶಾಲಾ ವಾಹನಗಳ ಎಫ್‌ಸಿ ನವೀಕರಣಕ್ಕೆ ಸೂಚನೆ..!

**ಜಿಲ್ಲೆಯಲ್ಲಿ 1030 ಶಾಲಾ ವಾಹನಗಳಿದ್ದು, ಇದರಲ್ಲಿ 350ಕ್ಕೂ ಅಧಿಕ ವಾಹನಗಳಿಗೆ ಎಫ್‌ಸಿ ನವೀಕರಣ ಆಗಿರುವುದಿಲ್ಲ. ಇದೇ ಫೆ.25ರ ಒಳಗಾಗಿ ನವೀಕರಿಸಿಕೊಳ್ಳಬೇಕು, ಇಲ್ಲವಾದಲ್ಲಿ ಅಂತಹ ವಾಹನಗಳನ್ನು ವಶಕ್ಕೆ ಪಡೆಯಲಾಗುತ್ತದೆ ಎಂದು ಜಿಲ್ಲಾಧಿಕಾರಿ ಸೂಚಿಸಿದ್ದಾರೆ.**

ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಮುತೇಶ್ ಮಾತನಾಡಿ, ಜಿಲ್ಲೆಯಲ್ಲಿರುವ 112 ಶಾಲಾ ವಾಹನಗಳಿಗೆ 15 ವರ್ಷ ದಾಟಿದೆ. 330 ವಾಹನಗಳ ಚಾಲ್ತಿ ದಾಖಲೆಗಳಿಲ್ಲ, ಅಂತಹ ವಾಹನಗಳಿಗೆ ನೋಟೀಸ್ ನೀಡಲಾಗಿದೆ. ಈಗಾಗಲೇ 22 ವಾಹನಗಳ ಮೇಲೆ ಪ್ರಕರಣ ದಾಖಲಿಸಿದ್ದು, 3 ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಎಂದರು.

ವಾಹನಗಳನ್ನು ಆಗಿಂದಾಗ್ಗೆ ತಪಾಸಣೆ ಮಾಡಲು ಸಾರಿಗೆ ಇನ್ಸ್‌ಪೆಕ್ಟರ್‌ಗಳಿಗೆ ನಿರ್ದೇಶನ ನೀಡಲಾಗಿದ್ದು, ಶಾಲಾ ಮಕ್ಕಳ ಹಿತ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಸಾರಿಗೆ ನಿಯಮ ಪಾಲಿಸದ ವಾಹನಗಳ ಮೇಲೆ ನಿರ್ದಾಕ್ಷಿಣ ಕ್ರಮ ಅನಿವಾರ್ಯವಾಗಿದೆ ಎಂದು ಎಚ್ಚರಿಸಿದರು.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕ ಜಿ. ಕೊಟ್ರೇಶ್, ಸ್ಮಾರ್ಟ್ ಸಿಟಿ ಎ.ಡಿ ವೀರೇಶ್, ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಕವಿತಾ ಇತರರು ಇದ್ದರು.

---

## ಇಂದು ಜ್ಞಾನದೀಪ ಸಂಭ್ರಮ

ಜ್ಞಾನದೀಪ ಪಬ್ಲಿಕ್ ಶಾಲೆಯ 11ನೇ ವರ್ಷದ 'ಜ್ಞಾನದೀಪ ಸಂಭ್ರಮ' ಶಾಲಾ ವಾರ್ಷಿಕೋತ್ಸವ ಸಮಾರಂಭ ಹಾಗೂ ಪ್ರಶಸ್ತಿ ವಿತರಣಾ ಕಾರ್ಯಕ್ರಮ ದಾವಣಗೆರೆಯ ಕನ್ನಡ ಕುವೆಂಪು ಭವನದಲ್ಲಿ ಇಂದು ಮಧ್ಯಾಹ್ನ 3.10ಕ್ಕೆ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ|| ಕೆ. ಬಸವರಾಜಪ್ಪ, ಕಾರ್ಯದರ್ಶಿ, ಜ್ಞಾನದೀಪ್ ಪಬ್ಲಿಕ್ ಶಾಲೆ ಇವರು ವಹಿಸಲಿದ್ದು, ಶ್ರೀ ಡಾ. ಬಸವಪ್ರಭು ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಎ. ಹನುಮಯ್ಯ, ಬಿ. ವಾಮ ದೇವಪ್ಪ, ಎಸ್.ಎನ್. ಕಿರಣ್‌ಕುಮಾರ್, ಎ.ಎಂ ಶಿವಕುಮಾರ್, ವಿ.ಷಣ್ಮುಖಚಾರ್, ಬಿ.ಎಂ. ಚೌಡಪ್ಪ, ಹೆಚ್.ಕೆ. ಲಿಂಗರಾಜನಾಯ್ಕ, ಎನ್.ಎಂ. ಕರಿಬಸಪ್ಪ, ಕೆ. ಪ್ರಭು, ಆರ್. ಶಿವಕುಮಾರ್ ಶೆಟ್ಟಿ, ಕೆ.ಎಸ್. ನಾಗರಾಜ್ ಸಿರಿಗೆರೆ., ಟಿ. ಅಣಬೇರು ಶಿವಮೂರ್ತಿ, ಡಾ. ವೀರೇಶ್ ಬಿರಾದಾರ್, ಟಿ. ಆರ್. ಹನುಮಂತಪ್ಪ, ಶ್ರೀಮತಿ ಮಂಜುಳಾ ಡಾ ಕೆ. ಬಸವರಾಜಪ್ಪ ಅವರುಗಳು ಪಾಲ್ಗೊಳ್ಳಲಿದ್ದಾರೆ.

## ಕಡ್ಲೇಬಾಳು ಗ್ರಾಮದಲ್ಲಿ ಇಂದು

ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 11 ಗಂಟೆಗೆ ಅವಭೃತ (ಓಕುಳಿ), ಸತ್ಯನಾರಾಯಣ ಸ್ವಾಮಿ ಪೂಜೆ, ಪಂಚಾಮೃತ ಅಭಿಷೇಕ, ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದದ ನಂತರ ಭಜನಾ ಮಂಡಳಿಗಳಿಂದ ಭಜನೆ ಕಾರ್ಯಕ್ರಮವಿರುತ್ತದೆ.

---

### ವಾಹನ ಸವಾರರೇ ಎಚ್ಚರ ಸಿಸಿ ಟಿವಿ ಕಣ್ಗಾವಲಿದೆ, ದಂಡದಿಂದ ತಪ್ಪಿಸಿಕೊಳ್ಳಲಾಗದು

## ರೆಡ್ ಸಿಗ್ನಲ್ ಜಂಪ್ ಒಂದೇ ಗಂಟೆಯಲ್ಲಿ 10 ಸಾವಿರ ದಂಡ

ದಾವಣಗೆರೆ, ಫೆ. 6- ದಾವಣಗೆರೆ ಸ್ಮಾರ್ಟ್ ಸಿಟಿಯಾಗಿದ್ದು, ನಗರದಲ್ಲಿ ಸುಸಜ್ಜಿತವಾದ ರಸ್ತೆಗಳು ನಿರ್ಮಾಣವಾಗಿವೆ. ಸಂಚಾರಿ ನಿಯಮಗಳ ಪಾಲನೆಗಾಗಿ ಸಿಗ್ನಲ್ ಅಳವಡಿಕೆ ಮಾಡಿದ್ದರೂ ಉಲ್ಲಂಘನೆ ಮಾಡಿ ಸಂಚರಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದು, ನಿಯಮ ಪಾಲನೆ ಮಾಡದ ಸವಾರರಿಗೆ ದಂಡ ಅನಿವಾರ್ಯವಾಗಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ತಿಳಿಸಿದ್ದಾರೆ.

ನಗರದ ವರ್ತುಲ ರಸ್ತೆಯಲ್ಲಿನ ಶ್ರೀ ಶಾರದಾಂಬ ದೇವಸ್ಥಾನ ಬಳಿ ಹಾಗೂ ಎಂ.ಬಿ.ರವೀಂದ್ರನಾಥ ವೃತ್ತ ಸೇರಿದಂತೆ ಇನ್ನಿತರೆ ವೃತ್ತಗಳಲ್ಲಿ ಗುರುವಾರ ಬೆಳಗ್ಗೆ 9 ಗಂಟೆಯ ವೇಳೆಯಲ್ಲಿ ಸಿಗ್ನಲ್ ಜಂಪ್ ಮಾಡಿ ಸಂಚರಿಸಿದ ಸವಾರರಿಗೆ ಒಂದೇ ಗಂಟೆಯಲ್ಲಿ 10 ಸಾವಿರಕ್ಕಿಂತಲೂ ಹೆಚ್ಚಿನ ದಂಡ ಹಾಕಲಾಗಿದೆ ಎಂದು ಅವರು ಹೇಳಿದರು.

ಕೆಲವು ದ್ವಿಚಕ್ರ ವಾಹನ ಸವಾರರು ವಿಮುಖವಾಗಿ ಸಂಚರಿಸುವುದು ಕಂಡು ಬರುತ್ತಿದ್ದರೆ, ಕೆಲವು ವಾಹನ ಸವಾರರು ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವುದನ್ನು ಗಮನಿಸಲಾಗಿದೆ. ಮತ್ತು ಯಾವುದೇ ಸೂಚನೆಯನ್ನು




ನೀಡದೇ ಮತ್ತು ಹಿಂದಿನ ವಾಹನಗಳನ್ನು ಗಮನಿಸದೇ ತಿರುವು ಪಡೆಯುವುದು ಸಹ ಅಪಘಾತಕ್ಕೆ ಕಾರಣವಾಗಿದ್ದು, ಅಪಘಾತಗಳನ್ನು ಗಣನೀಯವಾಗಿ ತಗ್ಗಿಸುವ ಉದ್ದೇಶದಿಂದ ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಲಾಗುತ್ತಿದೆ. ಸಂಚಾರಿ ನಿಯಮಗಳನ್ನು ಉಲ್ಲಂಘನೆ ಮಾಡುವವರು ಸೇರಿದಂತೆ, ವೃತ್ತಗಳಲ್ಲಿ ಸಿಗ್ನಲ್ ಜಂಪ್ ಮಾಡಿ ಸಂಚರಿಸಿದಲ್ಲಿ ದಂಡ ಕಟ್ಟಿಟ್ಟ ಬುತ್ತಿಯಾಗಿದೆ.

**ಸ್ಮಾರ್ಟ್‌ಸಿಟಿ ಕಮಾಂಡ್ ಸೆಂಟರ್‌ನಲ್ಲಿ ಸೆರೆ ;** ವಾಹನ ಸವಾರರು ಸಿಗ್ನಲ್ ಜಂಪ್ ಮಾಡುವುದು ಸೇರಿದಂತೆ ಯಾವುದೇ ಉಲ್ಲಂಘನೆಯ ಪ್ರಕರಣಗಳು ಕಂಡು ಬಂದಲ್ಲಿ ಅದೆಲ್ಲವೂ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿರುತ್ತದೆ. ನಗರದಲ್ಲಿ 525 ಕ್ಕೂ ಹೆಚ್ಚು ಹೈ ರೆಸ್ಯುಲೂಷನ್ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದರ ಸಂಪೂರ್ಣ ಡಾಟಾವನ್ನು ಸಂರಕ್ಷಣೆ ಮಾಡಲಾಗುತ್ತದೆ. ಯಾವುದೇ ವೃತ್ತ, ರಸ್ತೆಯಲ್ಲಿ ಸಂಚಾರಿ ನಿಯಮಗಳು ಉಲ್ಲಂಘನೆಯಾದರೂ ಸೆರೆಯಾಗುತ್ತದೆ.

**ಸಂಚಾರಿ ನಿಯಮ ಜಾಗೃತಿ;** ಜಿಲ್ಲೆಯಲ್ಲಿ ಕಳೆದ ವರ್ಷದಲ್ಲಿ 300 ಕ್ಕಿಂತ ಹೆಚ್ಚು ಜನರು ಅಪಘಾತ ಪ್ರಕರಣಗಳಲ್ಲಿ ಅಸುನೀಗಿದ್ದು ಇದು ಈ ವರ್ಷ ತಗ್ಗಿದೆ. ಅಪಘಾತ ಪ್ರಕರಣಗಳನ್ನು ಎರಡಂಕಿಗೆ ಇಳಿಸುವ ಉದ್ದೇಶದಿಂದ ಸಂಚಾರಿ ನಿಯಮಗಳ ಪಾಲನೆಯನ್ನು ಕಠಿಣಗೊಳಿಸಲಾಗುತ್ತಿದೆ. ಈಗಾಗಲೇ ಆಟೋ ಚಾಲಕರು, ಖಾಸಗಿ ಶಾಲಾ ಬಸ್ ಚಾಲಕರು, ಕೆಎಸ್‌ಆರ್‌ಟಿಸಿ ಬಸ್ ಚಾಲಕರ ಸಭೆ ಮಾಡಿ ಅರಿವು ಮೂಡಿಸಲಾಗಿದೆ. ನಗರದಲ್ಲಿ ವಿವಿಧ ಆಟೋ ಸಂಘಗಳೊಂದಿಗೂ ಮತ್ತು ಗೂಡ್ಸ್ ಆಟೋ, ಲಾರಿ ಮಾಲೀಕರ ಸಂಘಗಳೊಂದಿಗೂ ಸಭೆ ನಡೆಸುವ ಮೂಲಕ ಜಾಗೃತಿ ಮೂಡಿಸಲಾಗುತ್ತದೆ ಎಂದು ತಿಳಿಸಿದರು.

---

## ಶ್ರೀ ಅಕ್ಕಮಹಾದೇವಿ ವಧು-ವರಾನ್ವೇಷಣಾ ಕೇಂದ್ರದ ರಜತೋತ್ಸವ : ಸಮಾವೇಶ



ದಾವಣಗೆರೆ, ಜ. 6- ನಗರದ ಪಿ.ಜೆ. ಬಡಾವಣೆಯಲ್ಲಿರುವ ಶ್ರೀ ಅಕ್ಕಮಹಾದೇವಿ ವಧು-ವರಾನ್ವೇಷಣಾ ಕೇಂದ್ರದ 25ನೇ ವರ್ಷದ ರಜತ ಮಹೋತ್ಸವದ ಅಂಗವಾಗಿ ವಧು-ವರಾನ್ವೇಷಣೆ ಸಮಾವೇಶವು ನಾಡಿದ್ದು ದಿನಾಂಕ 8ರ ಶನಿವಾರ ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕೆ.ಕೆ. ಸುಶೀಲಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಯಾಗಿ ನಿವೃತ್ತ ಪ್ರಸೂತಿ ತಜ್ಞರಾದ ಶ್ರೀಮತಿ ಡಾ. ಶಾಂತಾಭಟ್ ಉಪಸ್ಥಿತರಿರುವರು.

ಅಕ್ಕಮಹಾದೇವಿ ಸಮಾಜದ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ನೀಲಗುಂದ, ಕಾರ್ಯದರ್ಶಿ ಸುವರ್ಣಮ್ಮ ದೊಗ್ಗಳ್ಳಿ, ವಧು-ವರ ಅನ್ವೇಷಣಾ ಕೇಂದ್ರದ ಅಧ್ಯಕ್ಷರಾದ ಶ್ರೀಮತಿ ಉಮಾ ವೀರಭದ್ರಪ್ಪ, ಕಾರ್ಯದರ್ಶಿ ಶ್ರೀಮತಿ ಶಾಂತಾ ಯಾವಗಲ್, ಸಹ ಕಾರ್ಯದರ್ಶಿ ಮಾಗಾನಹಳ್ಳಿ ರತ್ನಮ್ಮ ಮತ್ತು ಇತರರು ಉಪಸ್ಥಿತರಿರುವರು. ವಿವರಗಳಿಗಾಗಿ ಸಂಪರ್ಕಿಸಿ : 97401 06484, 97405 70332.

---

## ಕೋರ್ಟ್ ಆವರಣದಲ್ಲಿ ಬೀದಿ ನಾಯಿಗಳ ಹಾವಳಿ : ಸೆರೆ ಹಿಡಿದ ಪಾಲಿಕೆ ಸಿಬ್ಬಂದಿ



ದಾವಣಗೆರೆ, ಫೆ. 6- ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿ ಪಾಲಿಕೆ ಸಿಬ್ಬಂದಿ ಓಬಳಾನಾಯ್ಕ ಮತ್ತು ಶ್ರೀನಿವಾಸ ಅವರ ತಂಡದವರು ಆರು ಬೀದಿ ನಾಯಿಗಳನ್ನು ಬಲೆ ಬೀಸಿ ಸೆರೆ ಹಿಡಿದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿತ್ತು. ಇವುಗಳಿಂದ ನಿತ್ಯ ಕಕ್ಷಿದಾರರಿಗೆ, ವಕೀಲರಿಗೆ, ಸಿಬ್ಬಂದಿ ವರ್ಗಕ್ಕೆ ಹಿಂಸೆ ಆಗುತ್ತಿತ್ತು. ಈ ದಿನದಂದು ಸುಮಾರು ಏಳೆಂಟು ಕಕ್ಷಿದಾರರಿಗೆ ಬೀದಿ ನಾಯಿಗಳು ಕಚ್ಚಿದ್ದವು. ಆದ್ದರಿಂದ ಈ ಬೀದಿ ನಾಯಿಗಳನ್ನು ಹಿಡಿಯಲು ಮಹಾನಗರ ಪಾಲಿಕೆಗೆ ದೂರು ನೀಡಲಾಗಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಉಪದ್ರವಾಗುತ್ತಿದೆ ಎಂದ ರಿತು ಕೆಲವೇ ಕ್ಷಣಗಳಲ್ಲಿ ಈ ವಿಭಾಗಕ್ಕೆ ಸಂಬಂಧಿಸಿದ ಓಬ್ಳಾ ನಾಯಕ್ ಮತ್ತು ಶ್ರೀನಿವಾಸ ಅವರ ತಂಡವು ಆಗಮಿಸಿ, ಯಶಸ್ವಿಯಾಗಿ ಕಾರ್ಯಾಚರಣೆ ನಡೆಯಿಸಿ, ಆರು ನಾಯಿಗಳನ್ನು ತಮ್ಮ ಬಲೆಗಳಿಂದ ಹಿಡಿದರು. ಬೀದಿ ನಾಯಿಗಳಿಂದ ಸಾರ್ವಜನಿಕರು ಸಮಸ್ಯೆ ಎದುರಿಸುತ್ತಿದ್ದಲ್ಲಿ 9060196051 ಈ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬಹುದು.

## ವಾಲ್ಮೀಕಿ ಜಾತ್ರೆಯಲ್ಲಿ ಉದ್ಯೋಗ ಮೇಳ

ಮಲೇಬೆನ್ನೂರು, ಫೆ. 6 - ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವವನ್ನು ವಾಲ್ಮೀಕಿ ಗುರುಪೀಠದಲ್ಲಿ ಹಮ್ಮಿಕೊಳ್ಳಲಾಗಿದ್ದು, ನಾಡಿದ್ದು ದಿನಾಂಕ 8ರ ಶನಿವಾರ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ನೇತೃತ್ವದ 'ಸಂತೋಷ್ ಲಾಡ್ ಫೌಂಡೇಶನ್' ಹಾಗೂ ಶ್ರೀಮಠದ ಸಹಭಾಗಿತ್ವದಲ್ಲಿ ಉದ್ಯೋಗ ಮೇಳ ನಡೆಯಲಿದೆ. ಉದ್ಯೋಗಾಸಕ್ತರು ಆನ್‌ಲೈನ್ ರಿಜಿಸ್ಟ್ರೇಷನ್ ಮೂಲಕ ತಮ್ಮ ಹೆಸರನ್ನು ನೋಂದಾಯಿಸಬೇಕು. ನಾಡಿದ್ದು ದಿನಾಂಕ 8 ರಂದು ಹಾಜರಾಗಬೇಕು. ಜಾತ್ರಾ ಸಮಿತಿ ಅಧ್ಯಕ್ಷ ಜಗಳೂರು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 8867699477, 8296046106, 7259824287.

---

## ಜಗತ್ತಿನಲ್ಲಿ ಹೆಚ್ಚು ಮಾತನಾಡುವ ಭಾಷೆಗಳಲ್ಲಿ ಕನ್ನಡವೂ ಒಂದು

### ಹರಪನಹಳ್ಳಿ ಕಸಾಪ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಲೇಪಾಕ್ಷಪ್ಪ

ಹರಪನಹಳ್ಳಿ, ಫೆ. 6- ಜಗತ್ತಿನಲ್ಲಿ ಹೆಚ್ಚು ಜನರು ಮಾತನಾಡುವ ಭಾಷೆಗಳಲ್ಲಿ ಕನ್ನಡವು ಪ್ರಮುಖವಾದುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಲೇಪಾಕ್ಷಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ದಿ.ಕಂಚಿಕೇರಿ ಬಿದ್ರಿ ಸಿದ್ದಪ್ಪ ವೀರಮ್ಮ ಸ್ಮಾರಕ ದತ್ತಿ, ದಿ.ಕೊಟ್ರಪ್ಪ ಶ್ರೀಮತಿ ಹೆಚ್ ಬಸಮ್ಮ ದತ್ತಿ, ಕಂಚಿಕೇರಿ ಶ್ರೀಮತಿ ಬಿದರಿ ಮೀನಾಕ್ಷಮ್ಮ ರೇವಣಸಿದ್ದಪ್ಪ ದತ್ತಿ, ಕೆ.ಎಂ. ಗುರುಸಿದ್ದಯ್ಯ ಮತ್ತು ಕೆ.ಎಂ.ಗಿರಿಜಮ್ಮ ಜ್ಞಾಪಕಾರ್ಥ ದತ್ತಿ ಉದ್ಘಾಟಿಸಿ ಅವರು ಮಾತನಾಡಿದರು.

ಸಂಪದ್ಭರಿತವಾದ ಕರುನಾಡು ಸಾಹಿತ್ಯ, ಕಲೆ, ಸಂಸ್ಕೃತಿ ಕ್ಷೇತ್ರದಲ್ಲಿ ಉನ್ನತ ಪರಂಪರೆಯನ್ನು ಹೊಂದಿದೆ. ಸಮೃದ್ಧ ಕನ್ನಡನಾಡು ಸರಿಸಾಟಿಯಿಲ್ಲದಷ್ಟು ಸಂಪತ್ಭರಿತವಾಗಿದೆ. ನದಿ, ಖನಿಜ, ಬೆಟ್ಟ ಗುಡ್ಡ, ಸುಂದರ ಕಾನನ, ಸಾಗರದಂಚು, ಕೆರೆಕಟ್ಟೆಗಳು, ಜಲಾಶಯಗಳು, ಸುಂದರ ಹಾಗೂ ಮನಮೋಹಕ ಪ್ರವಾಸಿ ತಾಣಗಳು, ಗುಡಿಗೋಪುರಗಳ ಶ್ರೀಮಂತಿಕೆಯನ್ನು ಹೊಂದಿದೆ. ಕಾಯಕ ಎಂದಾಕ್ಷಣ ನಮ್ಮ ಮುಂದೆ



ಬಸವಣ್ಣನವರು ನೆನಪಿಗೆ ಬರುತ್ತಾರೆ. ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯನಂತಹ ಮಹಾ ಶರಣರು ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಮೂಲಕ ಸಮಾಜವನ್ನು ಎಚ್ಚರಿಸಿದರು ಎಂದರು.

ಅರಸಿಕೇರಿಯ ಉಪನ್ಯಾಸಕ ಡಾ. ಹಾದಿಮನಿ ರಮೇಶ 'ಕಾಯಕ ಮತ್ತು ಧರ್ಮ, ವೈಚಾರಿಕತೆ ಮತ್ತು ಧರ್ಮ' ಕುರಿತು ಮಾತನಾಡಿ, ಬದುಕಿಗಾಗಿ ಕಾಯಕ ಮಾಡಲೇಬೇಕು, ವೃತ್ತಿಯೇ ಕಾಯಕ, ಅದರಲ್ಲಿ ಮೇಲು-ಕೀಳೆಂಬುದಿಲ್ಲ. ಧರ್ಮ ಎಂದರೆ ಕಾರ್ಯ ಮಾಡುವುದು. ಬಿದ್ದವರು, ಬೀಳುತ್ತಿರುವ ರನ್ನು ಮೇಲೆತ್ತುವುದು.

ಶರಣರ ದೃಷ್ಟಿಯಲ್ಲಿ ಭವಿ ಮತ್ತು ಭಕ್ತ ಎನ್ನುವ ಎರಡು ಜಾತಿಗಳಿವೆ. ಆದರೆ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಮನು ಕುಲವನ್ನು ಪ್ರತ್ಯೇಕಿಸುವ ಮೂಲಕ ಶರಣರ ವೈಚಾರಿಕ ತತ್ವವನ್ನು ಮರೆಮಾಚುವ ಹುನ್ನಾರ ನಡೆದಿದೆ ಎಂದರು.

ದತ್ತಿ ದಾನಿ ಕನ್ನಡ ಉಪನ್ಯಾಸಕ ಎಚ್. ಮಲ್ಲಿಕಾರ್ಜುನ ಮಾತನಾಡಿ, ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಅವರು 107 ವರ್ಷಗಳ ಹಿಂದೆ 1914 ಮೇ 5 ಬುಧವಾರ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಹಾಗೂ ಎಲ್ಲ ಕನ್ನಡಪರ ಸಂಸ್ಥೆಗಳಿಗೆ ಮಾತೃ ಸಂಸ್ಥೆಯಾಗಿ ಪ್ರಾರಂಭದಿಂದಲೂ ಕನ್ನಡ-ಕನ್ನಡಿಗ-ಕರ್ನಾಟಕದ ಸೇವೆಗೆ ಕಂಕಣಬದ್ಧವಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಿ.ರಾಮನಮಲಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿ ಮಾಡುವ ಸದುದ್ದೇಶದಿಂದ ಶಾಲಾ-ಕಾಲೇಜುಗಳಲ್ಲಿ ದತ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಅನ್ಯ ಭಾಷೆಗಳ ಪ್ರಭಾವ ದಿಂದಾಗಿ ಕನ್ನಡ ಭಾಷೆಗೆ ದಕ್ಕೆ ಬಂದಿದೆ. ಮೂಲ ಕನ್ನಡ ಭಾಷೆಯಲ್ಲಿರುವ ಪದಗಳು ಸಾಕಷ್ಟು ಬದಲಾವಣೆಗಳು ಆಗಿವೆ. ಕನ್ನಡದಲ್ಲಿ ಇಂಗ್ಲಿಷ್ ಭಾಷೆ ಬೆರೆತಿದೆ. ಪ್ರತಿ ನಲವತ್ತು ಕಿ.ಮೀಗೆ ಒಂದು ಭಾಷೆ, ಸಂಸ್ಕೃತಿ ಸಂಪ್ರದಾಯವಿದೆ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಇಸ್ಮಾಯಿಲ್ ಎಲಿಗಾರ್, ಸರ್ಕಾರಿ ಪದವಿ ಪೂರ್ವ ಕಾಲೇಜು ಮುಖ್ಯ ಶಿಕ್ಷಕರಾದ ಎಂ.ಮಮ್ತಾಜ್, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ಗೌರವ ಕಾರ್ಯ ದರ್ಶಿ ಜಿ.ಮಹಾದೇವಪ್ಪ. ಕಾರ್ಯಕಾರಿ ಸಮಿತಿ ಸದಸ್ಯ ಎ. ಜಾವೀದ್, ಶಿಕ್ಷಕರಾದ ವಿಠೋಬ ಎಸ್.ಎಚ್, ಪಂಪನಾಯ್ಕ, ಜಿ.ದೇವರಾಜ, ಲತಾ ಎಂ. ರಾಠೋಡ್, ಎ.ಲಕ್ಯಾನಾಯ್ಕ ಸೇರಿದಂತೆ ಇತರರು ಇದ್ದರು.

---

## ನಗರದಲ್ಲಿ ಇಂದಿನಿಂದ ಮೂರು ದಿನ ದಿಂಡಿ ಮಹೋತ್ಸವ

ಬಂಬೂಬಜಾರ್ ಗೋಂದಳಿ ಸಮಾಜದ ಶ್ರೀ ವಿಠಲ ರುಖುಮಾಯಿ ಹರಿ ಮಂದಿರದಲ್ಲಿ 60 ನೇ ವರ್ಷದ ದಿಂಡಿ ಮಹೋತ್ಸವದ ಅಂಗವಾಗಿ ವಿಶ್ವಶಾಂತಿಗಾಗಿ ಶ್ರೀ ಗ್ರಂಥರಾಜ ಜ್ಞಾನೇಶ್ವರಿಯ ಸಾಮುದಾಯಿಕ ಪಾರಾಯಣ ಮತ್ತು ಅಖಂಡ ಹರಿನಾಮ ಸಪ್ತಾಹವು ಇಂದಿನಿಂದ ಇದೇ ದಿನಾಂಕ 9 ರವರೆಗೆ ನಡೆಯಲಿದೆ.

ಪ್ರತಿ ದಿನ ಬೆಳಿಗ್ಗೆ 4 ರಿಂದ 6 ಕಾಕಡಾರತಿ, ಬೆಳಿಗ್ಗೆ 7 ರಿಂದ 12 ರವರೆಗೆ ಸಾಮುದಾಯಿಕ ಪಾರಾಯಣ, ಸಂಜೆ 4.30 ರಿಂದ 6 ರವರೆಗೆ ನಾಮಜಪ, ಪ್ರವಚನ, ರಾತ್ರಿ 7 ರಿಂದ 9 ರವರೆಗೆ ಕೀರ್ತನೆ, ರಾತ್ರಿ 10.30 ರಿಂದ 1 ರವರೆಗೆ ಸಂಗೀತ, ಭಜನೆ, ಭಾರೂಡ ವ ಕಾರ್ಯಕ್ರಮಗಳು ಜರುಗಲಿವೆ.

ಇಂದು ಮಧ್ಯಾಹ್ನ 12 ರಿಂದ 1 ರವರೆಗೆ ಶ್ರೀ ಜಗದ್ಗುರು ತುಕಾರಾಮ್ ಮಹಾರಾಜ್ ಅನುಗ್ರಹದ ನಿಮಿತ್ಯ ಕೀರ್ತನೆ ಏರ್ಪಡಿಸಲಾಗಿದೆ.

ಇಂದು ಲಕ್ಷ್ಮೇಶ್ವರದ ನಾರಾಯಣ ನಭಿಸೆ ಅವರ, ನಾಳೆ ಶನಿವಾರ ದೂಪದಾಳದ ಯಶವಂತ ಅಟಕ್ ಅವರಿಂದ ಕೀರ್ತನೆ ನಡೆಯಲಿದೆ.

---

## ಜ್ಞಾನ ಭಂಡಾರ ಮಾಸ್ಟರ್ ಆರ್ಯವರ್ಧನ್ ಕೋಟಿ

ವಿದ್ಯೆ ಸಾಧಕನ ಸೊತ್ತೇ ಹೊರತು ಸೋಮಾರಿಗಳದ್ದಲ್ಲ, ಹಣವಂತರದ್ದೂ ಅಲ್ಲ ಎಂಬ ಮಾತಿಗೆ 4 ವರ್ಷದ ಬಾಲ ಪ್ರತಿಭೆ ಗ್ರ್ಯಾಂಡ್ ಮಾ. ಆರ್ಯವರ್ಧನ್ ಕೋಟಿ ಸಾಕ್ಷಿಯಾಗಿದ್ದಾರೆ.

ನವಲಗುಂದ ತಾ. ತಿರ್ಲಾಪುರ ಗ್ರಾಮದ ಗ್ರಾಮೀಣ ಶಿಕ್ಷಣ ಸಂಸ್ಥೆಯ ಪೌಢ ಶಾಲೆಯ ಕನ್ನಡ ಶಿಕ್ಷಕಿ ಮಂಜುಳಾ ಒಣರೊಟ್ಟಿ ಹಾಗೂ ಪರಪ್ಪ ಕೋಟಿ ಅವರ ಸುಪುತ್ರನಾಗಿದ್ದು, ನವಲಗುಂದದ ಶ್ರೀ ಕೃಷ್ಣ ಪ್ರಾಥಮಿಕ ಶಾಲೆಯಲ್ಲಿ ಎಲ್‌ಕೆಜಿ ಓದುತ್ತಿದ್ದಾರೆ.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಯಂತೆ ಈ ಪುಟ್ಟ ಪೋರ ತನ್ನ ವಯಸ್ಸಿಗೂ ಮೀರಿದ ಸಾಧನೆ ಮಾಡಿದ್ದಾರೆ. ಅಪಾರ ನೆನಪಿನ ಶಕ್ತಿ ಹೊಂದಿರುವ 4 ವರ್ಷದ ಬಾಲ ಪ್ರತಿಭೆ ಗ್ರ್ಯಾಂಡ್ ಮಾಸ್ಟರ್ ಆರ್ಯವರ್ಧನ್ ಕೋಟಿ ಇವರು ತಮ್ಮ ಜ್ಞಾಪಕ ಶಕ್ತಿಯನ್ನು ಅನಾವರಣಗೊಳಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್-2023ಕ್ಕೆ ಸೇರ್ಪಡೆಗೊಂಡಿದ್ದಾರೆ.

**ಪುಟ್ಟಪೋರ ಆರ್ಯವರ್ಧನ್ ಕೋಟಿ ತನ್ನ ಅಪಾರ ಜ್ಞಾಪಕ ಶಕ್ತಿಯಿಂದ**

* 28 ಲೋಕಸಭಾ ಸದಸ್ಯರ ಹೆಸರುಗಳು ಮತ್ತು ಕ್ಷೇತ್ರಗಳು * ಡಾ. ರಾಜಕುಮಾರ ನಟಿಸಿರುವ 206 ಚಲನಚಿತ್ರಗಳ ಹೆಸರುಗಳು * ಡಾ. ಪುನೀತ್ ರಾಜಕುಮಾರ ನಟಿಸಿದ 31 ಚಲನಚಿತ್ರಗಳ ಹೆಸರುಗಳು * ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರುಗಳ ಹೆಸರುಗಳನ್ನು ಅನುಕ್ರಮವಾಗಿ 1950 ರಿಂದ 2024ರ ವರೆಗೆ * ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ



### ನಗರದಲ್ಲಿ ಇಂದು 'ಸಂಗಮ ಶ್ರೀ' ಪ್ರಶಸ್ತಿ ಪ್ರದಾನ

ಹೆಸರುಗಳನ್ನು ಅನುಕ್ರಮವಾಗಿ 1947 ರಿಂದ 2024 ರವರೆಗೆ * ಭಾರತದ ಪ್ರಧಾನ ಮಂತ್ರಿಗಳ ಹೆಸರುಗಳನ್ನು ಅನುಕ್ರಮವಾಗಿ 1947 ರಿಂದ 2024 ರವರೆಗೆ * ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಹೆಸರುಗಳು * ಕರ್ನಾಟಕ ರತ್ನ ಪ್ರಶಸ್ತಿ ವಿಜೇತರ ಹೆಸರುಗಳನ್ನು 1992 ರಿಂದ 2022 ರವರೆಗೆ ಅನುಕ್ರಮವಾಗಿ * ಭಾರತ ರತ್ನ ಮತ್ತು ಕರ್ನಾಟಕ ರತ್ನ ಪ್ರಶಸ್ತಿ ವಿಜೇತರ ಹೆಸರುಗಳನ್ನು 1954 ರಿಂದ 2023ರ ವರೆಗೆ ಅನುಕ್ರಮವಾಗಿ * ಪಂಪ ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು 1987 ರಿಂದ 2023 ರ ವರೆಗೆ ಅನುಕ್ರಮವಾಗಿ* ನೋಬೆಲ್ ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು 1913 ರಿಂದ 2019ರ ವರೆಗೆ ಅನುಕ್ರಮವಾಗಿ * ಭಾರತದ 29 ರಾಜ್ಯಗಳು ಮತ್ತು ರಾಜಧಾನಿಗಳನ್ನು ಕೇವಲ 40 ಸೆಕೆಂಡ್‌ಗಳಲ್ಲಿ * ಕರ್ನಾಟಕದ ಎಲ್ಲಾ ಜಿಲ್ಲೆಗಳ ಹೆಸರು ಭಾರತದ ಸೇನಾ ಪ್ರಶಸ್ತಿಗಳ ಹೆಸರುಗಳು * ಭಗವದ್ಗೀತೆಯ ಅಧ್ಯಾಯಗಳ ಹೆಸರುಗಳು * ಶ್ರೀ ರಾಮಚಂದ್ರನ ವಂಶ ವೃಕ್ಷ * ನಕ್ಷತ್ರಗಳು, ತಿಥಿಗಳು, ನೆರೆಹೊರೆಯ ರಾಷ್ಟ್ರಗಳು, ರಾಜ್ಯಗಳು, ವೇದಗಳು, ವಿಶ್ವ ಸಂಸ್ಥೆಯ ಅಧಿಕೃತ ಭಾಷೆಗಳು, ಕರ್ನಾಟಕದಲ್ಲಿರುವ ಪೊಲೀಸ್ ವಲಯಗಳು, ಪ್ರಥಮ ಮಹಿಳಾ ಸಾಧಕಿಯರು, ವಿವಿಧ ರಾಷ್ಟ್ರಗಳ ರಾಷ್ಟ್ರೀಯ ಹೂ ಗಳ ಹೆಸರು, ರಾಜ್ಯಗಳ ವಿಶೇಷತೆಗಳು, ಗ್ರಹಗಳು, ಖಂಡಗಳು ಇವೆಲ್ಲವನ್ನೂ ಕುರಿತು 3000 ಕ್ಕೂ ಹೆಚ್ಚು ಸಾಮಾನ್ಯ ಜ್ಞಾನ ಪ್ರಶ್ನೆಗಳಿಗೆ ಪಟಪಟನೆ ಉತ್ತರಿಸುತ್ತಾನೆ.

ಈ ಬಾಲಕನ ಅಪಾರ ಜ್ಞಾನ ಭಂಡಾರಕ್ಕೆ ಮತ್ತು ಜ್ಞಾಪಕ ಶಕ್ತಿಯನ್ನು ಮೆಚ್ಚಿ 'ಇಂಡಿಯಾ ಬುಕ್ ಆಫ್ ರೆಕಾರ್ಡ್' ನವರು, ಇಂಡಿಯಾ ಬುಕ್ ಆಫ್ ರೆಕಾರ್ಡ್ ಪುಸ್ತಕದಲ್ಲಿ ಈ ಪುಟ್ಟ ಬಾಲಕನ ಹೆಸರನ್ನು ದಾಖಲಿಸಿದ್ದಾರೆ.

ಅಲ್ಲದೇ ವರ್ಲ್ಡ್ ರೆಕಾರ್ಡ್ ಯೂನಿವರ್ಸಿಟಿಯಿಂದ 'ಗ್ರ್ಯಾಂಡ್ ಮಾಸ್ಟರ್' ಎಂಬ ಅವಾರ್ಡ್ ಪ್ರದಾನ ಮಾಡಿದ್ದಾರೆ. ಜೊತೆ ಜೊತೆಗೆ 'ಕರುನಾಡ ಸಿರಿ', 'ಲಿಟಲ್ ಚಾಂಪಿಯನ್ ಆಫ್ ದಿ ಇಯರ್' ಸೇರಿದಂತೆ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಈತನ ಮುಡಿಗೇರಿವೆ. ವಯಸ್ಸಿಗಿಂತ ಜ್ಞಾನ ಮುಖ್ಯ ಎಂಬುದನ್ನು ಈ ಪುಟ್ಟಪೋರ ನಿರೂಪಿಸಿದ್ದಾರೆ. ಮತ್ತು ಈತ ಎಲ್ಲರಿಗೂ ಮಾದರಿಯಾಗಿದ್ದಾರೆ.

– ಎಂ.ಎಸ್. ಚನ್ನಬಸವ ಶೀಲವಂತ್, ದಾವಣಗೆರೆ.

---

## ನಗರದಲ್ಲಿ ಕೊಟ್ಟೂರೇಶ್ವರ ಪ್ರವಚನ

ದಾವಣಗೆರೆಯ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ವಿರಕ್ತಮಠದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ಪ್ರತಿ ದಿನ ಸಂಜೆ 6 ರಿಂದ 8.30 ರವರೆಗೆ ಶ್ರೀ ಕೊಟ್ಟೂರು ಗುರು ಬಸವೇಶ್ವರರ ಪುರಾಣ ಹಮ್ಮಿಕೊಳ್ಳಲಾಗಿದೆ. ಮರೋಳ ಹಿರೇಮಠದ ಮುದುಕಯ್ಯ ಶಾಸ್ತ್ರಿಗಳು ಪ್ರವಚನ ನಡೆಸಿಕೊಡಲಿದ್ದಾರೆ.

**ಫ್ಲಾಟ್‌ಗಳು ಮಾರಾಟಕ್ಕಿವೆ**

ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರ್ಯಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ

**ಬಿ.ಎಸ್. ಸಂತೋಷ, 96322 67555**

ಶ್ರೀ ಆದಿತ್ಯಾ ದೇವತಾಭ್ಯೋ ಭವನ

**ಶ್ರೀ ಆದಿತ್ಯಾ ಟೂರಿಸ್ಟ್, ದಾವಣಗೆರೆ**

**ಮಹಾಕುಂಭ ಮೇಳ ವಿಶೇಷ ಪ್ಯಾಕೇಜ್ ಟೂರ್**

(ಊಟ, ತಿಂಡಿ, ಟೀ, ಕಾಫಿ ಸೇರಿ)
8 ದಿನಗಳ ಲಕ್ಸುರಿ ಪುಶ್ ಬ್ಯಾಕ್ ಸೀಟಿನ ಬಸ್ ಪ್ರವಾಸ
ಪ್ರೇಕ್ಷಣೀಯ ಸ್ಥಳ : ಉಜ್ಜಯಿನಿ, ಪ್ರಯಾಗ್‌ರಾಜ್, ಅಯೋಧ್ಯ, ವಾರಣಾಸಿ
ದಾವಣಗೆರೆಯಿಂದ ಹೊರಡುವ
ದಿನಾಂಕ : 8-2-2025, ಬೆಳಿಗ್ಗೆ 8 ಗಂಟೆಗೆ
ಬುಕ್ಕಿಂಗ್ ಕೊನೆಯ ದಿನಾಂಕ : 7-2-2025
ಕೆಲವೇ ಸೀಟುಗಳು ಲಭ್ಯ.

ಒಬ್ಬರಿಗೆ ರೂ. 15,000/- ಮಾತ್ರ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 98447 07017, 73532 11207

